ಅಕ್ಟೋಬರ್ ೨೦೨೫


**ಆರ್ಬಿಟ್,ಹುಮನಾಬಾದ**

ಸಮಾಜ ಸೇವಾ ಸಂಸ್ಥೆ, ಎನ್.ಎಚ್. ೬೫ ರೈಲ್ವೇ
ನಿಲ್ದಾಣದ ಹತ್ತಿರ ಹುಮ್ನಾಬಾದ ತಾಲೂಕು,
ಬೀದರ್ ಜಿಲ್ಲೆ, ಕರ್ನಾಟಕ, 585330

**ಸೇವಾ ಸಂಗಮ ಸಂಸ್ಥೆ, ಕಲಬುರಗಿ**

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ
ಕೇಂದ್ರೀಯ ವಿದ್ಯಾಲಯ ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ


# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ





ಡಾ॥ ರಾಬರ್ಟ್ ಮೈಕಲ್ ಮಿರಂಡ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

### "ಆರ್ಬಿಟ್ ಸಂಸ್ಥೆಯ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ ರಕ್ತದಾನ ಶಿಬಿರ"

ಹುಮನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯಲ್ಲಿ, ಸಂಸ್ಥೆಯ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ, 03 ಸೆಪ್ಟೆಂಬರ್ 2025ರಂದು ಆರ್ಬಿಟ್ ಸಂಸ್ಥೆ ಹಾಗೂ ಐಸಿಐವೈಎಂ ಗುಲ್ಬರ್ಗ ಧರ್ಮಕ್ಷೇತ್ರದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ ವಂದನೀಯ ಫಾ. ಸಂತೋಷ್ ಬಾಪು ಮಾತನಾಡಿ, "ರಕ್ತದಾನ ಮಾಡುವುದು ಮಾನವ ಜೀವನದಲ್ಲಿ ಸಿಗುವ ಶ್ರೇಷ್ಠ ಅವಕಾಶ. ಪ್ರತಿಯೊಬ್ಬರೂ ಮತ್ತೊಬ್ಬರ ಜೀವ ಉಳಿಸುವ ಧೋರಣೆಯಿಂದ ರಕ್ತದಾನಕ್ಕೆ ಮುಂದೆ ಬರಬೇಕು. ಇಂತಹ ಸಮಾಜಮುಖಿ ಕಾರ್ಯಗಳಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ" ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ತಾಲೂಕ ವೈದ್ಯಾಧಿಕಾರಿ ಡಾ. ಶಿವಕುಮಾರ್ ಸಿದ್ದೇಶ್ವರ ಮಾತನಾಡಿ, "ಆರ್ಬಿಟ್ ಸಂಸ್ಥೆ ಹಲವು ವರ್ಷಗಳಿಂದ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದು, ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಜನಜಾಗೃತಿ ಹಾಗೂ ಸೇವಾ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಇಂದಿನ ರಕ್ತದಾನ ಶಿಬಿರ ಮಹತ್ವದ ಹೆಜ್ಜೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ. ವಿಕ್ಟರ್ ವಾಸ್ ಅವರು, "ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ರಕ್ತದಾನ. ತುರ್ತು ಪರಿಸ್ಥಿತಿಯಲ್ಲಿ ಅನೇಕರ ಜೀವ ಉಳಿಸಲು ಇದು ಬಹಳ ಉಪಯುಕ್ತ. ರಕ್ತದಾನ ಮಾಡುವ ಮೂಲಕ ಇತರರ ಜೀವ ಉಳಿಸುವುದರ ಜೊತೆಗೆ ದಾನಿಗಳಿಗೆ ಆರೋಗ್ಯಕರ ಪ್ರಯೋಜನವೂ ಲಭಿಸುತ್ತದೆ" ಎಂದು ಹೇಳಿದರು. ಬ್ರಿಮ್ಸ್ ಆಸ್ಪತ್ರೆಯ ರಕ್ತನಿಧಿ ಘಟಕದ ಡಾ. ಮಲ್ಲಣ್ಣ ಗೌಡ ಪಾಟೀಲ್ ನೇತೃತ್ವದ ತಂಡ ರಕ್ತ ಸಂಗ್ರಹ ಕಾರ್ಯ ನಿರ್ವಹಿಸಿತು. ಈ ಸಂದರ್ಭದಲ್ಲಿ ಗುರುಗಳಾದ ಸ್ಟಾನಿ ಲೋಬೊ, ಸಹ ನಿರ್ದೇಶಕ ಫಾ. ಆಲ್ಬರ್ಟ್, ಪೊಲೀಸ್ ಇಲಾಖೆಯ ಎಎಸ್ಐ ಅಶೋಕ್, ಐಸಿಐವೈಎಂ ನಿರ್ದೇಶಕ ಫಾ. ಸಚಿನ್, ಉಪನ್ಯಾಸಕಿ ಸಂತೋಷಿ ಹಾಗೂ ವಿದ್ಯಾರ್ಥಿ ವೃಂದ, ಎಚ್‌ಕೆಇಡಿ ಟ್ರಸ್ಟ್ ಹುಮನಾಬಾದ್ ಪ್ರತಿನಿಧಿಗಳು, ಸಿಸ್ಟರ್ ಲೀರಾ (ಬೆಥನಿ ಶಾಲೆ ಮುಖ್ಯಸ್ಥೆ), ಫಾ. ಜಾರ್ಜ್, ಫಾ. ರಾಬರ್ಟ್, ಫಾ. ವಿನಯ್, ಫಾ. ಆರೋನ್, ಫಾ. ಕ್ಲ್ಯಾರಿ, ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ ಹಾಗೂ ಆರ್ಬಿಟ್ ಸಿಬ್ಬಂದಿ ವರ್ಗ ಹಾಜರಿದ್ದರು. ಒಟ್ಟು 75 ಮಂದಿ ರಕ್ತದಾನ ಮಾಡಿ ಮಾನವೀಯತೆಯ ಮೌಲ್ಯವನ್ನು ಮೆರೆದರು.







ಮಾನವೀಯತೆಯ ಸೇವೆ,
ಉತ್ತಮ ನಾಳೆಯ ನಿರ್ಮಾಣ.

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಸ್ವ-ಉದ್ದಿಮೆ ಮೇಕೆ ಸಾಕಾಣಿಕೆ ಕುರಿತು ಜಾಗೃತಿ ಸಭೆ”



ದಿನಾಂಕ: 15-09-2025 ರಂದು ಆರ್ಬಿಟ್ ಸಂಸ್ಥೆ, ಹುಮನಾಬಾದ್ ಹಾಗೂ ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ನಿಂಬೂರು ಗ್ರಾಮದ ವಿಠಲ್ ಕಾಮಣ ಅವರ ಮನೆಯಲ್ಲಿ ಅಂಬೇಡ್ಕರ್ ವಿಶೇಷ ವಿಕಲಚೇತನರ ಸಂಘದ ಸಭೆ ನಡೆಯಿತು. ಸಭೆಯಲ್ಲಿ ಸದಸ್ಯರಿಗೆ ಮೇಕೆ ಸಾಕಾಣಿಕೆಯ ಉಪಯೋಗ ಮತ್ತು ಅದರ ಆರ್ಥಿಕ ಪ್ರಯೋಜನಗಳ ಕುರಿತು ಮಾಹಿತಿ ನೀಡಲಾಯಿತು. ಮೇಕೆ ಸಾಕಾಣಿಕೆ ಕಡಿಮೆ ಖರ್ಚಿನಲ್ಲಿ ಅಧಿಕ ಲಾಭ ನೀಡುವ ಉದ್ಯಮವಾಗಿದೆ. ಕಾರ್ಮಿಕರು ವಲಸೆ ಹೋದಾಗ ಮೇಕೆಗಳನ್ನು ಸುಲಭವಾಗಿ ಸ್ಥಳಾಂತರಿಸಬಹುದು ಹಾಗೂ ಪ್ರತ್ಯೇಕ ವಾಹನದ ಅಗತ್ಯವಿಲ್ಲ. ಮೇಕೆಯು ವರ್ಷಕ್ಕೆ ಎರಡು ಬಾರಿ ಮರಿಗಳಿಗೆ ಜನ್ಮ ನೀಡುತ್ತದೆ. ಇದು ಪ್ರಕೃತಿಯಲ್ಲಿ ದೊರೆಯುವ ಸೊಪ್ಪುಗಳನ್ನು ಸೇವಿಸುವುದರಿಂದ ಆಹಾರದ ವೆಚ್ಚವೂ ಕಡಿಮೆ. ಮೇಕೆಯ ಹಾಲು, ಮಾಂಸ ಮತ್ತು ಚರ್ಮದಿಂದ ಉತ್ತಮ ಆದಾಯ ಗಳಿಸಬಹುದು. ಮೇಕೆ ಸಾಕಾಣಿಕೆಯ ಮೂಲಕ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಬಹುದು ಹಾಗೂ ಪ್ರತ್ಯೇಕ ಕೋಣೆ ನಿರ್ಮಾಣದ ಅಗತ್ಯವೂ ಇರುವುದಿಲ್ಲ. ಸಭೆಯಲ್ಲಿ ಸದಸ್ಯರಿಗೆ ಮೇಕೆ ಸಾಕಾಣಿಕೆಯ ಈ ಎಲ್ಲ ಪ್ರಯೋಜನಗಳ ಕುರಿತು ವಿವರವಾಗಿ ಮನವರಿಕೆ ಮಾಡಿಕೊಡಲಾಯಿತು.

## “ಸರಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಾಸ್ಥರಿಗೆ ಮನೋವೈದ್ಯರ ಚಿಕಿತ್ಸೆಗೆ ಸಹಕರಿಸಿದ ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು”




14 ಸೆಪ್ಟೆಂಬರ್ 2025ರಂದು ಹುಮ್ನಾಬಾದ್ ಪಟ್ಟಣದ ಪೊಲೀಸ್ ಸಬ್ ಇನ್ಸೆಕ್ಟರ್ ಅವರು ನಮ್ಮ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೆ ಕರೆ ಮಾಡುವ ಮೂಲಕ ಒಬ್ಬ ಮಾನಸಿಕ ಅಸ್ವಸ್ಥನು ಹುಮ್ನಾಬಾದ್ ಪಟ್ಟಣದಲ್ಲಿ ಅಜ್ಞಾತವಾಗಿ ಸುತ್ತಾಡುತ್ತಿದ್ದು, ಪಟ್ಟಣದಲ್ಲಿರುವ ಪ್ರತಿಮೆಗಳಿಗೆ ಹಾಗೂ ಮೂರ್ತಿಗಳಿಗೆ ಕೆಸರು ಎರಚುವುದು, ಮಣ್ಣು ಎರಚುವುದು, ವಿರೂಪ ಗೊಳಿಸುವಂತಹ ಕೃತ್ಯ ಮಾಡುತ್ತಿದ್ದಾನೆ, ಈತನು ಸ್ವಯಂ ಆಗಿ ಹಾನಿ ಮಾಡಿಕೊಳ್ಳುವುದಲ್ಲದೆ ಸಾರ್ವಜನಿಕರಿಗೂ ಸಹ ಹಾನಿಯನ್ನು ಉಂಟುಮಾಡುವ ವರ್ತನೆ ತೋರುತ್ತಿದ್ದಾನೆ ಎಂದು ಮಾಹಿತಿ ನೀಡಿರುತ್ತಾರೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಆರ್ಬಿಟ್ ಸಂಸ್ಥೆಯ ನಿರ್ದೇಶಕರು ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣ್ ಕುಮಾರ್ ಕೋಟೆ ಮತ್ತು ಸಂಯೋಜಕರಾದ ಪ್ರವೀಣ್ ಅವರಿಗೆ ಮಾಹಿತಿ ನೀಡಿ ಪ್ರಕರಣವನ್ನು ಸೂಕ್ಷ್ಮವಾಗಿ ನಿರ್ವಹಣೆ ಮಾಡುವಂತೆ ನಿರ್ದೇಶಿಸಿದರು, ನಿರ್ದೇಶಕರ ನಿರ್ದೇಶನದಂತೆ ನಾವು ಹುಮ್ನಾಬಾದ್ ಪಟ್ಟಣದ ಪೊಲೀಸ್ ಠಾಣೆಗೆ ತೆರಳಿ ಪೋಲಿಸ್ ಸಬ್ ಇನ್ಸೆಕ್ಟರ್ ಅವರೊಂದಿಗೆ ಸಮಾಲೋಚಿಸಿ ಹುಮ್ನಾಬಾದ್ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಾಸ್ಥನಿದ್ದಾನೆ ಎಂಬ ದೃಢೀಕರಣಕ್ಕಾಗಿ ಪ್ರಯತ್ನಿಸಲಾಯಿತು. ಆದರೆ ಮನೋ ತಜ್ಞರು ಲಭ್ಯವಿಲ್ಲದ ಕಾರಣ ಅವರು ನಮಗೆ ಬೀದರ್ ಪಟ್ಟಣದ ಜಿಲ್ಲಾ ಆಸ್ಪತ್ರೆಗೆ ಶಿಫಾರಸು ಮಾಡಿದರು. ಅದರಂತೆ ಪೊಲೀಸ್ ಸಿಬ್ಬಂದಿಯವರೊಂದಿಗೆ ಆಂಬುಲೆನ್ಸ್ ನಲ್ಲಿ ಮಾನಸಿಕ ಅಸ್ವಸ್ಥನನ್ನು ಕರೆದುಕೊಂಡು ಬೀದರ್ ಜಿಲ್ಲಾ ಆಸ್ಪತ್ರೆಗೆ ತೆರಳಿ, ಆತನನ್ನು ಮನೋವೈದ್ಯರ ಎದುರಿಗೆ ಪರೀಕ್ಷಿಸಿ, ಎಂಟು ದಿವಸಗಳಿಗಾಗಿ ಅಡ್ಮಿಟ್ ಮಾಡಲಾಯಿತು. ಫಲಾನುಭವಿಯೊಂದಿಗೆ ಆತನ ಪತ್ನಿ ಪ್ರಸ್ತುತ ಬಿದ್ದು ಮುಂದಿನ ದಿನಗಳಲ್ಲಿ ಆರ್ಬಿಟ್ ಸಂಸ್ಥೆಯೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡು ಮುಂದಿನ ಚಿಕಿತ್ಸೆಗೆ ಅನುಕೂಲವಾಗುವಂತೆ ಕಾರ್ಯಕರ್ತರಿಗೆ ಸಹಕರಿಸುವಂತೆ ಸೂಚಿಸಲಾಯಿತು. ಈ ಪ್ರಕರಣದ ಸಹಾಯವನ್ನು ಕಂಡ ಫಲಾನುಭವಿಯ ಪತ್ನಿ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ತಿಳಿಸಿರುತ್ತಾರೆ. ಅಲ್ಲದೆ ಪೊಲೀಸ್ ಠಾಣೆಯ ಸಿಬ್ಬಂದಿ ವರ್ಗದವರು ಆರ್ಬಿಟ್ ಸಂಸ್ಥೆಯ ಸಮಾಜ ಸೇವೆಯನ್ನು ಶ್ಲಾಘಿಸಿದರು.

## “ಮಾನಸಿಕ ಅಸ್ವಸ್ಥರ ಸೇವೆಗೆ ಸಿಬ್ಬಂದಿ ತರಬೇತಿ ಕಾರ್ಯಾಗಾರ”





ದಿನಾಂಕ 11 ಮತ್ತು 12 ಸೆಪ್ಟೆಂಬರ್ 2025ರಂದು ಆರ್ಬಿಟ್ ಸಂಸ್ಥೆ, ಹುಮನಾಬಾದ್ ಮಾನಸಿಕ ಅಸ್ವಸ್ಥರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸಿಬ್ಬಂದಿಯ ನೈಪುಣ್ಯತೆ ಹೆಚ್ಚಿಸಲು ಆರ್ಬಿಟ್ ಸಂಸ್ಥೆಯ ವತಿಯಿಂದ ನವಜೀವನ ಸಿಬ್ಬಂದಿಗೆ ವಿಶೇಷ ಕ್ಷೇತ್ರಾಧಾರಿತ ಹಾಗೂ ವರ್ಗಾಧಾರಿತ ತರಬೇತಿ ಕಾರ್ಯಾಗಾರ ಆಯೋಜಿಸಲಾಯಿತು. ಕಾರ್ಯಾಗಾರದಲ್ಲಿ ಮಾನಸಿಕ ಆರೋಗ್ಯ ಕ್ಷೇತ್ರದ ಪ್ರಾಯೋಗಿಕ ವಿಷಯಗಳು, ಕೇಸ್ ಹ್ಯಾಂಡ್ಲಿಂಗ್ ತಂತ್ರಗಳು, ಸಾಮಾಜಿಕ ಸಂವಹನ ಹಾಗೂ ಸಮುದಾಯ ಆಧಾರಿತ ಸೇವೆಗಳ ಕುರಿತು ತರಬೇತಿ ನೀಡಲಾಯಿತು. ನುರಿತ ತರಬೇತಿದಾರರಾದ ಶ್ರೀ ಸಂತೋಷ್ (ಎ.ಪಿ.ಡಿ) ಸಂಸ್ಥೆ ಅವರು ಮಾನಸಿಕ ಅಸ್ವಸ್ಥರ ಅಗತ್ಯತೆಗಳು, ಅವರ ಮಾನವ ಹಕ್ಕುಗಳು ಹಾಗೂ ಪುನರ್ವಸತಿ ಪ್ರಕ್ರಿಯೆಗಳ ಕುರಿತು ಉಪನ್ಯಾಸ ನೀಡಿದರು. ಒಟ್ಟು 11 ಮಂದಿ ಸಿಬ್ಬಂದಿಗಳು ಭಾಗವಹಿಸಿ ಕಾರ್ಯಾಗಾರದಿಂದ ಪ್ರಯೋಜನ ಪಡೆದರು.

## “ಕಂದುಗೊಳ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ”



ದಿನಾಂಕ: 23-09-2025ರಂದು ಕಂದುಗೊಳ ಗ್ರಾಮ, ಚಿಟಗುಪ್ಪಾ ತಾಲೂಕು, ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗಾಗಿ ಆರ್ಬಿಟ್ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜಿ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್‌ಕುಮಾರ್ ಅವರು ಭಾಗವಹಿಸಿ, ಮಾನಸಿಕ ಆರೋಗ್ಯ ಮತ್ತು ಮಾನಸಿಕ ಕಾಯಿಲೆಯ ಲಕ್ಷಣಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಅವರು ಸಮುದಾಯದಲ್ಲಿ ಮಾನಸಿಕ ಕಾಯಿಲೆಯನ್ನು ಕುರಿತ ಮೂಢನಂಬಿಕೆಗಳನ್ನು ನಿವಾರಿಸಿ, ಇದು ಮೆದುಳಿನ ರಾಸಾಯನಿಕ ವ್ಯತ್ಯಾಸಗಳಿಂದ ಉಂಟಾಗುವ ಕಾಯಿಲೆ ಎಂದು ವಿವರಿಸಿದರು. ಸರ್ಕಾರದ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ದೊರೆಯುತ್ತದೆ ಎಂಬುದರ ಕುರಿತು ಮಹಿಳೆಯರಿಗೆ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಮಂದಿ ಮಹಿಳೆಯರು ಭಾಗವಹಿಸಿದರು.

## “ಪಾಲಕ್ಕಿ ಸಂತ ಮದರ್ ತೆರೇಸಾ ಅವರ ಸ್ಮರಣಾರ್ಥ “ರಕ್ತದಾನ ಶ್ರೇಷ್ಠ ದಾನ”



ದಿನಾಂಕ 02-09-2025 ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ ಗ್ರಾಮದಲ್ಲಿ ವಿಶೇಷ ಚೇತನರ ಡಿಪಿಯೋಸ್ ಸಭೆ ನಡೆಯಿತು. ಈ ಸಭೆಯಲ್ಲಿ ದಿನಾಂಕ 03-09-2025 ರಂದು ನಡೆಯಲಿರುವ ರಕ್ತದಾನ ಶಿಬಿರದ ಕುರಿತು ಚರ್ಚೆ ನಡೆಯಿತು. ಆರ್ಬಿಟ್ ಸಂಸ್ಥೆಯ ಪಾಲಕ್ಕಿ ಸಂತ ಮದರ್ ತೇರೇಸಾ ಅವರ ಸ್ಮರಣಾರ್ಥ ನಡೆಯುವ ಈ ರಕ್ತದಾನ ಶಿಬಿರದ ಬಗ್ಗೆ ಸಂಘಿಗೆ ವಿಶೇಷ ಚೇತನರ ಸಂಘದ ಸದಸ್ಯರಿಗೆ ಮಾಹಿತಿ ನೀಡಲಾಯಿತು. ಸಭೆಯಲ್ಲಿ ಸದಸ್ಯರಿಗೆ “ರಕ್ತದಾನ ಶ್ರೇಷ್ಠ ದಾನ” ಎಂಬ ಸಂದೇಶವನ್ನು ಹಂಚಿಕೊಳ್ಳಲಾಯಿತು. ನಿಮ್ಮಲ್ಲಿ ಯಾರಾದರೂ ರಕ್ತದಾನ ಮಾಡಲು ಇಚ್ಛಿಸುವವರು ಈ ಶಿಬಿರದಲ್ಲಿ ಭಾಗವಹಿಸಲು ವಿನಂತಿಸಲಾಯಿತು. ಹೆಣ್ಣು-ಗಂಡು ಎಂಬ ಭೇದವಿಲ್ಲದೆ, 18 ರಿಂದ 60 ವರ್ಷದೊಳಗಿನ ಆರೋಗ್ಯವಂತ ವ್ಯಕ್ತಿಗಳು ಧಾರಾಳವಾಗಿ ರಕ್ತದಾನ ಮಾಡಬೇಕೆಂದು ಸಭೆಯಲ್ಲಿ ತಿಳಿಸಲಾಯಿತು.

## “ಮದರ್ ತೆರೇಸಾ ಅವರ ಸ್ಮರಣಾರ್ಥವಾಗಿ ಹಬ್ಬಾ ಆಚರಣೆ”



ದಿನಾಂಕ: 09-09-2025ರಂದುವ ಆರ್ಬಿಟ್ ಸಂಸ್ಥೆ, ಹುಮನಾಬಾದ್, ಮದರ್ ತೆರೇಸಾ ಅವರ ಸ್ಮರಣಾರ್ಥವಾಗಿ "ಮದರ್ ತೆರೇಸಾ ಹಬ್ಬ"ವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ಸಚಿನ್ (ನಿರ್ದೇಶಕರು ಐಸಿಐಎಂ) ಅವರು ಮದರ್ ತೆರೇಸಾಅವರ ನಿಸ್ವಾರ್ಥ ಸೇವಾ ಜೀವನದ ಕುರಿತು ಪ್ರಭಾವಶಾಲಿ ಉಪನ್ಯಾಸ ನೀಡಿದರು. ಸಂಸ್ಥೆಯ ಸಿಬ್ಬಂದಿ ವರ್ಗದವರು ಪ್ರಾರ್ಥನಾ ಸಭೆ, ಪುಷ್ಪಾರ್ಚನೆ ಹಾಗೂ ಸಾಮಾಜಿಕ ಜವಾಬ್ದಾರಿಯ ಕುರಿತು ಚಿಂತನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಬ್ರದರ್ ಯಾನ್ಸಿ ಅವರಿಂದ ಆಟೋಟ ಸ್ಪರ್ಧೆಗಳು ನಡೆಸಲ್ಪಟ್ಟವು ಹಾಗೂ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಿಬ್ಬಂದಿ ಸದಸ್ಯರು ಭಕ್ತಿಗೀತೆಗಳು, ನೃತ್ಯ ಹಾಗೂ ನಾಟಕಗಳ ಮೂಲಕ ಮದರ್ ತೆರೇಸಾ ಅವರ ಜೀವನವನ್ನು ಪ್ರಸ್ತುತಪಡಿಸಿದರು. ಈ ಕಾರ್ಯಕ್ರಮದಲ್ಲಿ ಫಾದರ್ ವಿಕ್ಟರ್ ವಾಸ್ (ನಿರ್ದೇಶಕರು), ಫಾದರ್ ಆಲ್ಬರ್ಟ್ (ಸಹ ನಿರ್ದೇಶಕರು), ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ, ಸಿಸ್ಟರ್ ಕ್ರಿಸ್ಟಿನಾ ಹಾಗೂ ಸಿಸ್ಟರ್ ಯಡ್ನಾ ಸೇರಿದಂತೆ ಒಟ್ಟು 60 ಮಂದಿ ಸಿಬ್ಬಂದಿ ಭಾಗವಹಿಸಿದರು.

## “ಆಪ್ತ ಸಮಾಲೋಚನೆ ಕಾರ್ಯಕ್ರಮ – ಮರ್ಕಲ ಗ್ರಾಮ”



ದಿನಾಂಕ: 22-09-2025ರಂದು ಅಂಗನವಾಡಿ ಕೇಂದ್ರ, ಮರ್ಕಲ ಗ್ರಾಮ, ಹುಮನಾಬಾದ್ ತಾಲೂಕು, ನವಜೀವನ ಎ.ಪಿ.ಎಫ್. ಯೋಜನೆ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಭಾಗವಾಗಿ ಆಪ್ತ ಸಮಾಲೋಚನೆ ಆಯೋಜಿಸಲಾಯಿತು. ಸಮಾಲೋಚನೆಯಲ್ಲಿ ಫಲಾನುಭವಿಗಳು ತಮ್ಮ ಜೀವನದ ಕಠಿಣ ಪರಿಸ್ಥಿತಿಗಳು ಹಾಗೂ ಆಶಾವಾದದ ವಿಚಾರಗಳನ್ನು ಹಂಚಿಕೊಂಡರು. ಕೆಲವರು ಆರ್ಥಿಕ ತೊಂದರೆಗಳನ್ನು ಉಲ್ಲೇಖಿಸಿದರು. ಸಮಾಲೋಚನೆಯಿಂದ ಅವರು ಆತ್ಮವಿಶ್ವಾಸ, ಧೈರ್ಯ ಮತ್ತು ಹೊಸ ಉತ್ಸಾಹವನ್ನು ಪಡೆದಿದ್ದಾರೆ. ಮನೋವೈದ್ಯರನ್ನು ಭೇಟಿಯಾಗಿ ಸಲಹೆ, ಮಾರ್ಗದರ್ಶನ ಪಡೆಯುತ್ತಿದ್ದಾರೆ ಮತ್ತು ಸಮುದಾಯದ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಕೊನೆಯಲ್ಲಿ ಫಲಾನುಭವಿಗಳು ಅಜೀಂ ಪ್ರೇಮ್ ಜಿ ಫೌಂಡೇಶನ್, ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಹಾಗೂ ಆಪ್ತ ಸಮಾಲೋಚಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

## "ಖಿನ್ನತೆಯಿಂದ ಹೊರಬಂದು ಮಾನಸಿಕ ಅಸ್ವಸ್ಥರು ಉದ್ಯೋಗದತ್ತ ಮುಖ"



ಚಿಟಗುಪ್ಪಾ ವಲಯ, ಮಾನಸಿಕ ಅಸ್ವಸ್ಥರ ಕಾರ್ಯಕ್ರಮದಲ್ಲಿ 01-11-2022 ರಿಂದ ನಿರಂತರವಾಗಿ ಮೂರು ವರ್ಷಗಳು ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮ್ ಜಿ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಸೇವೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಸಂಸ್ಥೆಯು ಮಾನಸಿಕ ಅಸ್ವಸ್ಥರ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ಸೇವೆಗಳನ್ನು ಒದಗಿಸುತ್ತಿದೆ. ದಿನನಿತ್ಯ ಮಾತ್ರೆ ಪರಿಶೀಲನೆ, ಚಟುವಟಿಕೆ ಮಾರ್ಗದರ್ಶನ ಹಾಗೂ ಆಪ್ತ ಸಮಾಲೋಚನೆಯ ಮೂಲಕ ಈಗ ಮಾನಸಿಕ ಅಸ್ವಸ್ಥರು ನಿರುದ್ಯೋಗದಿಂದ ಹೊರಬಂದು ಉದ್ಯೋಗಸ್ಥರಾಗಿ ತಮ್ಮ ಕುಟುಂಬವನ್ನು ಮುನ್ನಡೆಸುವ ಶಕ್ತಿಯನ್ನು ಪಡೆದಿದ್ದಾರೆ.

## "ಚಿಟಗುಪ್ಪಾ ನಗರದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ"



ದಿನಾಂಕ: 30-09-2025ರಂದು ಚಿಟಗುಪ್ಪಾ ನಗರ, ಚಿಟಗುಪ್ಪಾ ತಾಲೂಕು, ಮಹಿಳಾ ಸದಸ್ಯರಿಗಾಗಿ ಆರ್ಬಿಟ್ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜಿ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಹಣಮಂತ ರವರು ಭಾಗವಹಿಸಿ, ಮಾನಸಿಕ ಆರೋಗ್ಯ ಎಂದರೇನು ಮತ್ತು ಮಾನಸಿಕ ಕಾಯಿಲೆಯ ಲಕ್ಷಣಗಳ ಕುರಿತು ಮಹಿಳೆಯರಿಗೆ ಸಂಪೂರ್ಣ ಮಾಹಿತಿ ನೀಡಿದರು.

# "ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕ್ರಮ"

## "ದಾಖಲಾತಿ ನಿರ್ವಹಣೆಗಳ ಕುರಿತು ತರಬೇತಿ"



ದಿನಾಂಕ 12.09.2025 ರಂದು ಹುಮ್ನಾಬಾದ್ ತಾಲೂಕಿನ ಕಪ್ಪರಗಾವ್ ಗ್ರಾಮದಲ್ಲಿರುವ ಗಾಂಧಿ ಮಹಾಸಂಗದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು ದಾಖಲಾತಿ ನಿರ್ವಹಣೆಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಘ ಮತ್ತು ಮಹಾ ಸಂಘಕ್ಕೆ ಬೇಕಾಗಿರುವ ಪ್ರತಿಯೊಂದು ಪುಸ್ತಕಗಳ ದಾಖಲೆಗಳನ್ನು ಕ್ರಮಬದ್ಧವಾಗಿಟ್ಟುಕೊಳ್ಳಬೇಕು, ಏಕೆಂದರೆ ಇದು ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ ಜೊತೆಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಜವಾಬ್ದಾರಿಯ ಆಗಿರುತ್ತದೆ ಈ ಕುರಿತು ಸದಸ್ಯರು ಸಹ ನಿರ್ಲಕ್ಷ ಮಾಡಬಾರದು ಇದು ಪ್ರತಿಯೊಬ್ಬರಿಗೂ ಅನ್ವಯಿಸುವಂಥ ದಾಖಲೆಗಳಾಗಿರುತ್ತವೆ. ಏಕೆಂದರೆ ಬಡವರು ದಿನಗೂಲಿಯಲ್ಲಿ ಒಬ್ಬರಿಂದ ಒಬ್ಬರು ಸ್ವ ಸಹಾಯ ಮಾಡಿಕೊಳ್ಳುವಂತಹ ವಿವರಣೆಯನ್ನು ಒಳಗೊಂಡಿರುತ್ತದೆ. ಆದುದರಿಂದ ಸಂಘದ ಪ್ರತಿಯೊಂದು ಪುಸ್ತಕಗಳು ಹಾಗೂ ಬ್ಯಾಂಕ್ ಪುಸ್ತಕ ಇತ್ಯಾದಿ ವಿವರಣೆಯನ್ನು ಒಳಗೊಂಡಿರುವಂತಹ ಹಾಗೂ ಇತರ ಇಲಾಖೆಗಳಿಗೆ ಕೊಟ್ಟಿರುವಂತಹ ಅರ್ಜಿಗಳನ್ನು ಮಹಾಸಂಗದ ಮೂಲಕ ಮಾಡಿರುವ ಕಾರ್ಯಕ್ರಮದ ಫೋಟೋ ವರದಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರೊಂದಿಗೆ ಕ್ರಮಬದ್ಧವಾಗಿ ಇಟ್ಟುಕೊಳ್ಳುವ ಜವಾಬ್ದಾರಿಯನ್ನು ಸಂಘದಲ್ಲಿರುವ ಪ್ರತಿಯೊಬ್ಬ ಸದಸ್ಯರು ತೆಗೆದುಕೊಳ್ಳಬೇಕಾಗುತ್ತದೆ .ಎಂದು ದಾಖಲೆಗಳ ಮಹತ್ವವನ್ನು ತಿಳಿಸಲಾಯಿತು.

## "ಸ್ವ-ಉದ್ಯೋಗದಲ್ಲಿ ತೊಡಗಿದ ಮಹಿಳಾ ಸ್ವ-ಸಹಾಯ ಕ್ರಾಸ್ ಸಂಸ್ಥೆಯ ಸಂಯೋಜಕರಿಂದ ಪರಿಶೀಲನೆ ಭೇಟಿ"



ದಿನಾಂಕ 11.9.2025ರಂದು ಹುಮ್ನಬಾದ್ ತಾಲೂಕಿನ ಚೀನಕೆರ ಗ್ರಾಮದಲ್ಲಿರುವ ಅರುಣೋದಯ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಕ್ರಾಸ್ ಸಂಸ್ಥೆ ಬೆಂಗಳೂರು ಸಮೃದ್ಧಿ ಯೋಜನೆಯ ಸಂಯೋಜಕರಾದ ಶ್ರೀ ಚಿನ್ನಪ್ಪ ರವರು ಭೇಟಿ ನೀಡಿ ಸಮೃದ್ಧಿ ಯೋಜನೆಯಿಂದ ಕಿರು ಉದ್ದಿಮೆಗಳಿಗಾಗಿ ತೆಗೆದುಕೊಂಡಿರುವ ಸಾಲವನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆ, ಎಷ್ಟು ಜನರು ಸ್ವಉದ್ಯೋಗದಲ್ಲಿ ತೊಡಗಿದರೆ ಎಂಬುವುದರ ಕುರಿತು ಪರಿಶೀಲನೆ ಮಾಡಿದರು. ಮಹಿಳೆಯರು ತಮ್ಮ ಕೆಲಸದೊಂದಿಗೆ ಕಿರು ಉದ್ದಿಮೆಯಲ್ಲಿ ತೊಡಗಿ ಆದಾಯವನ್ನು ವೃದ್ಧಿಸಿಕೊಂಡು ತಮ್ಮ ಕುಟುಂಬವನ್ನು ಅಭಿವೃದ್ಧಿಯತ್ತ ಸಾಗಿಸುವಲ್ಲಿ ಪ್ರಯತ್ನಿಸಬೇಕು ಮತ್ತು ಆದಾಯೋತ್ಪನ್ನಗಳಿಗೆ ಸಾಲವನ್ನು ಬಳಸಿಕೊಂಡು ಅದರಿಂದ ಬರುವ ಲಾಭವನ್ನು ಮರುಪಾವತಿ ಮಾಡಬೇಕು. ಉದಾಹರಣೆಗೆ ಕುರಿ ಸಾಗಾಣಿಕೆ, ಹೈನುಗಾರಿಕೆ, ಕಿರಣೀ ಅಂಗಡಿ, ಟೈಲರಿಂಗ್, ವಾಹನ ಚಾಲನೆ ಇತ್ಯಾದಿ. ಸಮೃದ್ಧಿ ಯೋಜನೆ ಯಿಂದ ಕೊಟ್ಟಿರುವ ಸಾಲವು ನೀವು ಸಮೃದ್ಧಿಯಾಗಿ ಬೆಳೆಯಲಿ ಎನ್ನುವ ಉದ್ದೇಶಕ್ಕಾಗಿ ನೀಡಲಾಗಿದೆ. ಅದರ ಸದ್ದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

## “ಉಚಿತ ಕಾನೂನು ಕುರಿತು ತರಬೇತಿ”




ಸೆಪ್ಟೆಂಬರ್ 16 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ಮಹಿಳಾ ಸ್ವಸಾಯ ಸಂಘದ ಸದಸ್ಯರಿಗೆ ಶ್ರೀಮತಿ ಅಮಿತಾರವರು ಉಚಿತ ಕಾನೂನು ಕುರಿತು ತರಬೇತಿನ ಹಮ್ಮಿಕೊಂಡಿದ್ದರು. ನವ ಜೀವನ ಕಾರ್ಯಕ್ರಮದ ಕಾರ್ಯಕರ್ತ ಶ್ರೀ ಡೇವಿಡ್ ಉಚಿತ ಕಾನೂನು ತರಬೇತಿಯ ಕುರಿತು ಮಾಹಿತಿಯನ್ನು ನೀಡಿದರು. ಉಚಿತ ಎಂದರೆ ಫ್ರೀಯಾಗಿ ನಮಗೆ ಏನೆಲ್ಲಾ ಸಿಗುತ್ತದೆಯೋ ಅದು ಉಚಿತ, ಉಚಿತ ಕಾನೂನು ಎಂದರೆ ಬಡ ಮತ್ತು ದುರ್ಬಲ ವ್ಯಕ್ತಿಗಳಿಗೆ ಯಾವುದೇ ಶುಲ್ಕವಿಲ್ಲದೆ ಕಾನೂನು ಸಲಹೆ ಮತ್ತು ಸಹಾಯವನ್ನು ಒದಗಿಸುವಂತಹ ಒಂದು ವ್ಯವಸ್ಥೆ. ಇದರ ಉದ್ದೇಶ ಅವರಿಗೆ ನ್ಯಾಯ ತಲುಪುವಂತೆ ಮಾಡುವುದು. ಉಚಿತ ಕಾನೂನು ನೆರವು ಎಂದರೆ ಇದು ಬಡವರು ಆರ್ಥಿಕವಾಗಿ ಹಿಂದುಳಿದವರು ಮತ್ತು ಸಮಾಜದ ದುರ್ಬಲ ವರ್ಗದವರಿಗೆ ಕಾನೂನು ಸಲಹೆ ವಕೀಲರ ಸಹಾಯ ಮತ್ತು ನ್ಯಾಯಾಲಯದ ಪ್ರಕ್ರಿಯೆಗಳಲ್ಲಿ ಬೆಂಬಲವನ್ನು ಒದಗಿಸುವ ಒಂದು ವ್ಯವಸ್ಥೆಯಾಗಿದೆ. ಇದರ ಮುಖ್ಯ ಉದ್ದೇಶವು ಹಣಕಾಸಿನ ಕೊರತೆಯಿಂದಾಗಿ ಯಾವುದೇ ವ್ಯಕ್ತಿ ನ್ಯಾಯದಿಂದ ವಂಚಿತರಾಗದಂತೆ ನೋಡಿಕೊಳ್ಳುವುದಾಗಿದೆ. ಉಚಿತ ಕಾನೂನು ಮಹಿಳೆಯರ ಮೇಲೆ ಅತ್ಯಾಚಾರ ದೌರ್ಜನ್ಯ ಸಂಭವಿಸಿದಾಗ ಮಹಿಳಾ ಸಹಾಯವಾಣಿ 119 ಕೆ ಕರೆಮಾಡಿ ಉಚಿತ ಸೇವೆಯನ್ನು ಪಡೆದುಕೊಳ್ಳಲು ಮುಂದಾಗಬೇಕು. ಹೆಣ್ಣು ಮಕ್ಕಳ ಮೇಲೆ ದೌರ್ಜನ ಉಂಟಾದಾಗ ಪೊಲೀಸ್ ಠಾಣೆ ಹಾಗೂ ನ್ಯಾಯಾಲಯಕ್ಕೆ ಧೈರ್ಯದಿಂದ ಹೋಗುವುದರ ಮೂಲಕ ತಮ್ಮ ಸಮಸ್ಯೆಗಳಿಗೆ ಕಾನೂನಿನ ನೆರವು ಪಡೆದುಕೊಳ್ಳಬೇಕು. ಸಮಸ್ಯೆಗಳನ್ನು ಬಗೆಹರಿಸಿ ಬಗೆಹರಿಸಿಕೊಳ್ಳಬೇಕು ಎಂದು ಉದಾಹರಣೆಗಳ ಮೂಲಕ ತಿಳಿಸಲಾಯಿತು. ಸ್ವ ಸಹಾಯ ಸಂಘದ ಮಹಿಳೆಯರು ಉಚಿತ ಕಾನೂನಿನ ನೆರವಿನ ಕುರಿತು ತಿಳಿದುಕೊಂಡರು.

## “ತಾಯಂದಿರ ಸಭೆಯಲ್ಲಿ ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ತರಬೇತಿ”



ಭಾಲ್ಕಿ ತಾಲೂಕಿನ ಕನಪುರ ಗ್ರಾಮದಲ್ಲಿ ದಿನಾಂಕ 19.09.2025 ರಂದು ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ರವರು ಅಂಗನವಾಡಿಯಲ್ಲಿ ಆಯೋಜಿಸಿದ ತಾಯಂದಿರ ಸಭೆಯಲ್ಲಿ ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ತರಬೇತಿಯನ್ನು ನೀಡಿದರು. ಈ ತರಬೇತಿಯಲ್ಲಿ 15 ಜನರು ಭಾಗವಹಿಸಿದರು. ಲಿಂಗ ಮತ್ತು ಲಿಂಗತ್ವ ಕಿರುವ ವ್ಯತ್ಯಾಸದ ಕುರಿತು ಜನರಿಗೆ ವಿವರಣೆಯನ್ನು ನೀಡಿದರು. ಲಿಂಗ ಅಂದರೆ ಪ್ರಕೃತಿದತ್ತವಾಗಿ ಬಂದಿರುವುದು ದೇವರ ದೃಷ್ಟಿಯಲ್ಲಿ ಗಂಡು–ಹೆಣ್ಣು ಎಂಬ ಭೇದಭಾವವಿಲ್ಲ ಇಬ್ಬರು ಸಮಾನರು. ಲಿಂಗತ್ವ ಅಂದರೆ ಸಮಾಜದ ನೀತಿ ನಿಯಮಗಳು ಮತ್ತು ಕಟ್ಟುಪಾಡುಗಳು. ಅಂದರೆ ಹೆಣ್ಣು ಗಂಡಿಗೆ ಆದ ಕೆಲವು ನಿಯಮಗಳನ್ನು ಸೃಷ್ಟಿ ಮಾಡಿರುವುದು. ಆದರಿಂದ ನಮ್ಮ ಕುಟುಂಬದಲ್ಲಿ ಗಂಡು ಹೆಣ್ಣು ಎಂಬ ಭೇದಭಾವವಿಲ್ಲದೆ ಸಮಾನತೆಯ ಕುಟುಂಬ ನಿರ್ಮಾಣ ಮಾಡುವುದರೊಂದಿಗೆ ಮಕ್ಕಳಲಿ ಯಾವುದೇ ತಾರತಮ್ಯ ಮಾಡದೇ ಸಮಾನತೆಯ ಭಾವನೆಯನ್ನು ಮೂಡಿಸುವುದು. ಹೆಣ್ಣು ಮಗಳಿಗೆ ತಿಳಿಸುವಂತಹ ಪ್ರತಿಯೊಂದು ವಿಷಯವು ಗಂಡು ಮಗುವಿಗೂ ತಿಳಿಸುವುದು ತಂದೆ ತಾಯಿಯರ ಕರ್ತವ್ಯವಾಗಿದೆ ಎಂದು ತಿಳಿಸಲಾಯಿತು.

## “ಜನಶಕ್ತಿ ತಾಲೂಕ ಒಕ್ಕೂಟದ ಸಭೆ”



ಸೆಪ್ಟೆಂಬರ್ 22 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನಲ್ಲಿ ಜನಶಕ್ತಿ ತಾಲೂಕ ಒಕ್ಕೂಟದ ಸಭೆಯನ್ನು ನಡೆಸಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ರವರು ಮಹಿಳೆಯರ ಮೇಲೆ ಆಗುವ ಅತ್ಯಾಚಾರ ದೌರ್ಜನ್ಯ ಕಿರುಕುಳ ಇವುಗಳ ಕುರಿತು ನಾವೆಲ್ಲರೂ ಜಾಗೃತರಾಗಬೇಕು ಎಂದು ಹೆಣ್ಣು ಮಕ್ಕಳಿಗೆ ಮನವರಿಕೆ ಮಾಡಿದರು. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದರೆ ಇಂತಹ ಕೃತ್ಯಗಳು ತಡೆಗಟ್ಟಬಹುದು ಎಂಬುದರ ಕುರಿತು ತಿಳಿಸಿದರು. ಜನಶಕ್ತಿ ತಾಲೂಕ ಒಕ್ಕೂಟದ ಮಹಿಳೆಯರು ಇಲಾಖೆಗಳಿಗೆ ಅರ್ಜಿಯನ್ನು ಸಲ್ಲಿಸಿದರು.

## “ಮಹಾಸಂಘ ಬಲವರ್ಧನೆ ಕುರಿತು ತರಬೇತಿ”



ಸೆಪ್ಟೆಂಬರ್ 12 2025ರಂದು ಚಿಟ್ಟಗುಪ್ಪಾ ತಾಲೂಕಿನ ಬೆಳಕೇರ ಗ್ರಾಮದಲ್ಲಿ ಸಂಘದ ಮಹಿಳೆಯರಿಗೆ ಮಹಾಸಂಗ ಬಲವರ್ಧನೆ ಕುರಿತು ತರಬೇತಿಯನ್ನು ನೀಡಲಾಯಿತು. ಪ್ರತಿ ತಿಂಗಳು ಮಹಾಸಂಘದಲ್ಲಿ ಎಲ್ಲರೂ ಭಾಗವಹಿಸಿ ಸಮುದಾಯ ಅಭಿವೃದ್ಧಿ ಆಗಬೇಕಾದರೆ ನೀವೆಲ್ಲರೂ ನಾಯಕತ್ವ ಜವಾಬ್ದಾರಿ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು ಎಂದು ಕಾರ್ಯಕರ್ತರಾದ ಶ್ರೀಮತಿ ರೀಟಾ ರವರು ಸಂಘದ ಮಹಿಳೆಯರಿಗೆ ತಿಳಿಸಲಾಯಿತು. ಹಳ್ಳಿಯಲ್ಲಿರುವ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡುಕೊಳ್ಳುವಲ್ಲಿ ಮುಂದಾಗಬೇಕೆಂದು ಮಾಹಿತಿ ನೀಡಲಾಯಿತು.

## "ಹಕ್ಕೋತಾಯ ಮತ್ತು ಜಾಲಬಂದ ಕುರಿತು ತರಬೇತಿ"



ಬಾಲ್ಕಿ ತಾಲೂಕಿನ ಕೋಸಂ ಮತ್ತು ಜೋಳದಪ್ಪಕಾ ಸ್ವಸಹಾಯ ಸಂಘದ ಸದಸ್ಯರಿಗೆ ಹಕ್ಕೋತಾಯ ಮತ್ತು ಜಾಲಬಂದ ಕುರಿತು ತರಬೇತಿಯನ್ನು ಮಾಡಲಾಯಿತು. ಈ ತರಬೇತಿಯಲ್ಲಿ ಸುಮಾರು 30 ಸದಸ್ಯರು ಭಾಗವಹಿಸಿದ್ದರು ಮೊಟ್ಟಮೊದಲಿಗೆ ತರಬೇತಿಯನ್ನ ಪ್ರಾರಂಭಿಸುವ ಮುಂಚೆ ಹಕ್ಕು ಎಂದರೇನು ಮತ್ತು ನಾವು ಅಧಿಕಾರಿಗಳ ಜೊತೆ ನಮ್ಮ ಒಡನಾಟ ಅಥವಾ ಜಾಲಬಂದ ಹೇಗಿರಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಯಿತು. ಉದಾಹರಣೆ ನಮ್ಮ ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್ ಇರುತ್ತೆ ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಇರುತ್ತಾರೆ ಹಾಗೂ ಪ್ರತಿನಿಧಿಗಳು ಕೂಡ ಇರುತ್ತಾರೆ ನಮ್ಮ ಹಳ್ಳಿಗಳಲ್ಲಿ ನಮಗೋಸ್ಕರ ಅನೇಕ ಸೌಕರ್ಯಗಳನ್ನು ನಾವು ಗ್ರಾಮ ಪಂಚಾಯತಿಯಿಂದಲೇ ಪಡೆದುಕೊಳ್ಳಬಹುದು. ಕುಡಿಯುವ ನೀರು, ರಸ್ತೆ, ಚ್ವರಂಡಿ, ಸಿಸಿ ರಸ್ತೆ, ಮನೆಗಳು ಹಾಗೂ ಪರಿಸರ ಸ್ವಚ್ಚತೆ ಇನ್ನು ಅನೇಕ ಸೌಕರ್ಯಗಳು ನಮಗೆ ಗ್ರಾಮ ಪಂಚಾಯತಿಯಿಂದಲೇ ಸಿಗುತ್ತದೆ. ಅದಕ್ಕೆ ನಾವು ನಮ್ಮ ಸಂಘಗಳಿಂದ ಅರ್ಜಿಗಳ ಮೂಲಕ ನಮ್ಮ ಹಳ್ಳಿಗಳಲ್ಲಿ ಇರುವ ಮೂಲ ಸೌಕರ್ಯಗಳನ್ನು ಪಡೆದುಕೊಳ್ಳಬಹುದು ಅದೇ ರೀತಿ ನಮಗೆ ವಾಸವಾಗಿರಲು ಮನೆ ಕೂಡ ಪಡೆದುಕೊಳ್ಳಬಹುದು ಆದುದರಿಂದ ಹಕ್ಕೋತಾಯ ಮತ್ತು ಜಾಲಬಂದ ಎಂದು ಹೇಳುತ್ತೇವೆ ಎಂದು ಮಾಹಿತಿ ನೀಡಿದರು.

## "ಲಿಂಗ ಮತ್ತು ಲಿಂಗತ್ವ ವ್ಯತ್ಯಾಸದ ಕುರಿತು ಮಾಹಿತಿ ಕಾರ್ಯಗಾರ"




ಸೆಪ್ಟೆಂಬರ್ 23 2025ರಂದು ಚಟ್ಟಗುಪ್ಪ ತಾಲೂಕಿನ ಕಂದಗೂಳ ಗ್ರಾಮದಲ್ಲಿ ಸಂಘದ ಮಹಿಳೆಯರಿಗೆ ಹಾಗೂ ಸಮುದಾಯದ ಜನರಿಗೆ ಮಹಿಳಾ ಸಬಲೀಕರಣ ಯೋಜನೆಯ ಪ್ರೇರಣಾ ತಂಡದ ಸದಸ್ಯರು ಶ್ರೀಮತಿ ಅಮಿತಾ ಲಿಂಗ ಮತ್ತು ಲಿಂಗತ್ವ ವ್ಯತ್ಯಾಸದ ಕುರಿತು ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣ್ ಕುಮಾರ್ ಕೋಟೆ ಹಾಗೂ ಶ್ರೀಮತಿ ಭಾಗ್ಯಶ್ರೀ ಅವರು ಲಿಂಗ ಮತ್ತು ಲಿಂಗ ಸಮಾನತೆ ಕುರಿತು ಮಾತನಾಡುತ್ತಾ. ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರ ಜೀವನವನ್ನು ಸಬಲಗೊಳಿಸಬಹುದು ತಾವುಗಳು ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ ಸಮಾನ ದೃಷ್ಟಿಕೋನದಿಂದ ಶಿಕ್ಷಣ ನೀಡಿ ಹೆಣ್ಣು ಮಕ್ಕಳ ಉಜ್ವಲ ಭವಿಷ್ಯಕ್ಕೆ ಪೋಷಕರು ಉತ್ತಮ ಕೊಡುಗೆ ನೀಡಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಎಲ್ಲ ಮಹಿಳೆಯರು ಲಿಂಗ ಸಮಾನತೆಯನ್ನು ಅನುಸರಿಸಿ ಹೆಣ್ಣು ಗಂಡು ಎಂಬ ಭೇದವಿಲ್ಲದೆ ತಮ್ಮ ಮಕ್ಕಳಿಗೂ ಉತ್ತಮ ಶಿಕ್ಷಣ ಕಲ್ಪಿಸಿಕೊಳ್ಳುತ್ತೇವೆ ಎಂದು ಪ್ರಮಾಣ ಮಾಡಿದರು. ಸಭೆಯಲ್ಲಿ ವಂದನೀಯ ಫಾದರ್ ಜಾರ್ಜ್ ಹಾಗೂ ಅರುಣ್ ಕುಮಾರ್ ಇವರು ಭಾಗವಹಿಸಿದ್ದರು. ಒಟ್ಟು 23 ಜನ ಸದಸ್ಯರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು

## "ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ತರಬೇತಿ"




ಸಪ್ಟೆಂಬರ್ 19 2025ರಂದು ಭಾತಂಬ್ರಾ ಗ್ರಾಮದಲ್ಲಿ ಮಹಿಳಾ ಸಬಲೀಕರಣದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ತರಬೇತಿಯನ್ನು ಹಮ್ಮಿಕೊಂಡಿದ್ದರು. ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಎಂದರೆ ನಮ್ಮ ಸುತ್ತಮುತ್ತಲಿನಿರುವ ವಾತಾವರಣವೇ ಸಂಪನ್ಮೂಲವಾಗಿದೆ ಸಂಪನ್ಮೂಲಗಳ ವಿಧಗಳು ಎರಡು. ನೈಸರ್ಗಿಕ ಸಂಪನ್ಮೂಲ ಮತ್ತು ಮಾನವನ ಸಂಪನ್ಮೂಲ. ನೈಸರ್ಗಿಕ ಸಂಪನ್ಮೂಲಗಳೆಂದರೆ ಬಿಸಿಲು, ಮಳೆ, ಸೂರ್ಯ, ಚಂದ್ರ, ಹಗಲು, ರಾತ್ರಿ, ಮಳೆಗಾಲ ಮತ್ತು ಚಳಿಗಾಲ ಮತ್ತು ಬೇಸಿಗೆ ಕಾಲ ಇವುಗಳನ್ನು ನೈಸರ್ಗಿಕ ಸಂಪನ್ಮೂಲಗಳು ಎಂದು ಕರೆಯುತ್ತಾರೆ. ಮಾನವನ ಸಂಪನ್ಮೂಲಗಳೆಂದರೆ ಮಾನವನಿಗೆ ಅಗತ್ಯವಾದ ವಸ್ತುಗಳು ಮತ್ತು ಇನ್ನು ಕೆಲವು ವಸ್ತುಗಳು ಅಗತ್ಯವಾದ ವಸ್ತುಗಳೆಂದರೆ ಬಟ್ಟೆ ನೀರು ಆಹಾರ ಮತ್ತು ಒಂದು ಚಿಕ್ಕ ಮನೆ ಇನ್ನು ಕೆಲವು ವಸ್ತುಗಳೆಂದರೆ ಟೂತ್‌ಪೇಸ್ಟ್. ಬ್ರಷ್. ಸಾಬೂನ್. ವಾಷಿಂಗ್ ಮಷೀನ್. ಫ್ರಿಜ್ಜ. ಸಿಲಿಂಡರ್ ಗ್ಯಾಸ್ ಇತ್ಯಾದಿಗಳು ಮಾನವನ ಸಂಪನ್ಮೂಲಗಳಾಗಿವೆ. ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಮಾನವನ ಸಂಪನ್ಮೂಲಗಳು ನಾವು ಪಡೆದುಕೊಳ್ಳುತ್ತೇವೆ. ದಿನನಿತ್ಯವು ನಮಗೆ ಅಗತ್ಯವಾದ ವಸ್ತುಗಳಾಗಿವೆ ಎಂದು ಹೇಳಿ ತಿಳಿಸುತ್ತಾ ಶ್ರೀಮತಿ ಲಕ್ಷ್ಮಿ ಅವರ ಧನ್ಯವಾದ ಗಳೊಂದಿಗೆ ಈ ತರಬೇತಿಯನ್ನು ಮುಕ್ತಾಯ ಮಾಡಲಾಗಿದೆ.

## "ಹಕ್ಕೋತಾಯ ಮತ್ತು ಜಾಲಬಂದದ ಕುರಿತು ತರಬೇತಿ"



ಸೆಪ್ಟೆಂಬರ್ 23 2025ರಂದು ಭಾಲ್ಕಿ ತಾಲೂಕಿನ ಭಾಗ್ಯನಗರ್ ಗ್ರಾಮದಲ್ಲಿ ಭಾಗ್ಯೋದಯ ಸಂಘದ ಸದಸ್ಯರಿಗೆ ಶ್ರೀಮತಿ ಸುಜಾತ ರವರು ಹಕ್ಕೋತಾಯ ಮತ್ತು ಜಾಲಬಂದದ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು ಸಂಘದ ಸದಸ್ಯರು ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಊರಿನ ಸಮಸ್ಯೆ ಗಲ್ಲಿಯ ಸಮಸ್ಯೆ ಇದ್ದಾಗ ವಿವಿಧ ಇಲಾಖೆಗಳೊಂದಿಗೆ ಜಾಲಬಂದ ಬೆಳೆಸಿಕೊಂಡು ಸಮಸ್ಯೆ ಪರಿಹರಿಸಿಕೊಳ್ಳುವಲ್ಲಿ ಮುಂದಾಗಬೇಕೆಂದು ತಿಳಿಸಿದ್ದರು. ಕೌಟುಂಬಿಕ ದೌರ್ಜನ್ಯ ಅಂದರೆ ಕುಟುಂಬದಲ್ಲಿ ಸಣ್ಣಪುಟ್ಟ ಜಗಳವಾದಾಗ ಸಂಘದ ಅಥವಾ ಮಹಾಸಂಗದ ಪದಾಧಿಕಾರಿಗಳು ಕುಟುಂಬಕ್ಕೆ ಭೇಟಿ ಮಾಡುವುದರೊಂದಿಗೆ ಸಾಂತ್ವನ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಮನಮುಟ್ಟುವಂತೆ ತಿಳಿಸಲಾಯಿತು. ಧೈರ್ಯ ನಾಯಕತ್ವವನ್ನು ಬೆಳೆಸಿಕೊಂಡು ಸಮಸ್ಯೆಗಳು ಎದುರಾದಾಗ ಮುನ್ನುಗ್ಗಿ ಪರಿಹರಿಸಿಕೊಳ್ಳುವಲ್ಲಿ ಮುಂದಾಗಿರಿ ಎಂದು ಅವರನ್ನು ಹುರಿದುಂಬಿಸಿದರು. ಈ ತರಬೇತಿಯಲ್ಲಿ ಸಂಘದ ಪದಾಧಿಕಾರಿಗಳು ಭಾಗವಹಿಸಿ ಹಕ್ಕೊತಾಯ ಮತ್ತು ಜಾಲಬಂದದ ಕುರಿತು ತಿಳಿದುಕೊಂಡರು.

## "ಉಚಿತ ಆರೋಗ್ಯ ಶಿಬಿರ ವರದಿ – ಏಕಾಂಬಾ ಗ್ರಾಮ"



2025ರ ಸೆಪ್ಟೆಂಬರ್ 30 ರಂದು ಆರ್ಬಿಟ್ ಸಂಸ್ಥೆಯ ಸ್ಥಳೀಯ ಸಂಯೋಜಕಿ ಸೌ. ಸಿಸ್ಟರ್ ಲೀನಟ್ ಅವರ ನೇತೃತ್ವದಲ್ಲಿ, ಅಪೆಕ್ಸ್ ಆಸ್ಪತ್ರೆ, ಬೀದರ್ ಅವರ ಸಹಯೋಗದಲ್ಲಿ ಏಕಾಂಬಾ ಗ್ರಾಮದಲ್ಲಿ ಉಚಿತ ವೈದ್ಯಕೀಯ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಶಿಬಿರದ ಮುಖ್ಯ ಉದ್ದೇಶ ಗ್ರಾಮೀಣ ಜನರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು, ಸಾಮಾನ್ಯ ಕಾಯಿಲೆಗಳನ್ನು ಗುರುತಿಸುವುದು ಮತ್ತು ಅವರಿಗೆ ಸರಿಯಾದ ಚಿಕಿತ್ಸೆ ನೀಡುವುದಾಗಿತ್ತು. ಗ್ರಾಮೀಣ ಪ್ರದೇಶದ ಅನೇಕ ಜನರು ಆರೋಗ್ಯ ಕೇಂದ್ರಗಳಿಗೆ ತೆರಳಲು ಆಗದೆ ಮನೆಯಲ್ಲೇ ಕಾಯಿಲೆಗಳಿಂದ ಬಳಲುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ಡಾ. ಮಲ್ಲಿಕಾರ್ಜುನ ಎಮ್ಮೆ (ಅಪೆಕ್ಸ್ ಆಸ್ಪತ್ರೆ, ಬೀದರ್) ಅವರು ವಿವಿಧ ಕಾಯಿಲೆಗಳ ಪರೀಕ್ಷೆ ನಡೆಸಿ ತಕ್ಕ ಸಲಹೆ ನೀಡಿದರು. ಜೊತೆಗೆ ಸಿಸ್ಟರ್ ಸೆಕುಂಡಾ ಮತ್ತು ಸಿಸ್ಟರ್ ರೀನಾ ಸಹ ರೋಗಿಗಳ ನಾಡಿ ಪರೀಕ್ಷೆ, ರಕ್ತದೊತ್ತಡ, ಶರ್ಕರ ಪರೀಕ್ಷೆ ಮುಂತಾದ ಕಾರ್ಯಗಳಲ್ಲಿ ಸಹಾಯ ಮಾಡಿದರು. ಜನರಿಗೆ ಸ್ವಚ್ಛತೆ, ಪೌಷ್ಠಿಕ ಆಹಾರ ಹಾಗೂ ನಿಯಮಿತ ಆರೋಗ್ಯ ತಪಾಸಣೆಯ ಮಹತ್ವದ ಕುರಿತು ತಿಳಿಸಲಾಯಿತು. ಶಿಬಿರದಲ್ಲಿ ಮಕ್ಕಳ ಆರೋಗ್ಯ, ಮಹಿಳೆಯರ ಆರೋಗ್ಯ, ಹಿರಿಯ ನಾಗರಿಕರ ಸಮಸ್ಯೆಗಳ ಕುರಿತು ವಿಶಿಷ್ಟ ಮಾರ್ಗದರ್ಶನವೂ ನೀಡಲಾಯಿತು. ಗ್ರಾಮಸ್ಥರು ಈ ಸೇವೆಯನ್ನು ತುಂಬ ಸಂತೋಷದಿಂದ ಸ್ವೀಕರಿಸಿದರು ಹಾಗೂ ವೈದ್ಯಕೀಯ ಸೇವೆ ಗ್ರಾಮಮಟ್ಟದಲ್ಲಿ ದೊರಕಿದಕ್ಕಾಗಿ ಅಪಾರ ಕೃತಜ್ಞತೆ ವ್ಯಕ್ತಪಡಿಸಿದರು. ಭವಿಷ್ಯದಲ್ಲಿಯೂ ಇಂತಹ ಶಿಬಿರಗಳು ನಿರಂತರವಾಗಿ ನಡೆಯಲಿ ಎಂಬ ಆಶಯವನ್ನು ಅವರು ಹಂಚಿಕೊಂಡರು. ಈ ಶಿಬಿರದ ಯಶಸ್ಸಿಗೆ ಓರ್ಬಿಟ್ ಎನ್‌ಜಿಒ ತಂಡ, ಅಪೆಕ್ಸ್ ಆಸ್ಪತ್ರೆಯ ವೈದ್ಯರು, ಸ್ಥಳೀಯ ಸಹಾಯಕರು, ಹಾಗೂ ಸ್ವಯಂಸೇವಕರು ತಮ್ಮ ಶ್ರಮ ಮತ್ತು ಸಹಕಾರವನ್ನು ನೀಡಿದರು. ಒಟ್ಟು 95 ಮಂದಿ ರೋಗಿಗಳು ಈ ಶಿಬಿರದಲ್ಲಿ ಭಾಗವಹಿಸಿ ಉಚಿತ ವೈದ್ಯಕೀಯ ತಪಾಸಣೆ ಹಾಗೂ ಅಗತ್ಯ ಔಷಧಿಗಳನ್ನು ಪಡೆದರು.

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ರಾಷ್ಟ್ರೀಯ ಪೋಷಣ ಅಭಿಯಾನದ ಕಾರ್ಯಕ್ರಮ"



ಸೆಪ್ಟೆಂಬರ್ 12 2025ರಂದು ಹುಮನಾಬಾದ್ ತಾಲೂಕಿನ ಸೇವಾ ನಗರ ತಾಂಡದಲ್ಲಿ ಶೀಘ್ರ ಪತ್ತೆ ಹಚ್ಚವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ರಾಷ್ಟ್ರೀಯ ಪೋಷಣ ಅಭಿಯಾನದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾಹಿತಿಯನ್ನು ನೀಡಿದರು. ರಾಷ್ಟ್ರೀಯ ಪೋಷಣ ಅಭಿಯಾನವನ್ನು ಮಾರ್ಚ್ 2018 ರಂದು ರಾಜಸ್ಥಾನದ ಜುಮ್ ಜುಮ್ನದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಅವರು ಪ್ರಾರಂಭಿಸಿದರು. ಈ ಕಾರ್ಯಕ್ರಮವು ಸೊನ್ನೆಯಿಂದ ಆರು ವರ್ಷದವರೆಗಿನ ಮಕ್ಕಳ ಗರ್ಭಿಣಿಯರ ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತೆಯ ಸ್ಥಿತಿಯನ್ನು ನಿರ್ದಿಷ್ಟ ಅವಧಿಗೆ ಅನುಗುಣವಾಗಿ ಸುಧಾರಿಸುವ ನಿಮಿತ್ಯ ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಪ್ರತಿವರ್ಷ ಎಲ್ಲಾ ಇಲಾಖೆಗಳ ಸಹಕಾರದಿಂದ ಸೆಪ್ಟೆಂಬರ್ ತಿಂಗಳಲ್ಲಿ ಪೋಸ್ಟ್ನ ಅಭಿಯಾನ ಯೋಜನೆ ಅಡಿಯಲ್ಲಿ ಪೋಷಣ ತಿಂಗಳ ಎಂದು ಆಚರಿಸಲಾಗುವುದು. ಈ ಯೋಜನೆಯ ಪ್ರಮುಖ ಉದ್ದೇಶಗಳೆಂದರೆ– ಮಕ್ಕಳಲ್ಲಿ ಉಂಟಾಗುವ ಕುಂಠಿತ ಬೆಳವಣಿಗೆಯನ್ನ ತಡೆಗಟ್ಟುವುದು ಹಾಗೂ ಕಡಿಮೆಗೊಳಿಸುವುದು. ದೇಶದಲ್ಲಿ ಮಕ್ಕಳ ಪೋಷ್ಟಿಕಾಂಶ ಸ್ಥಿತಿಯನ್ನು ಹೆಚ್ಚಿಸುವುದು. ಚಿಕ್ಕ ಮಕ್ಕಳಲ್ಲಿ ಉಂಟಾಗುವ ರಕ್ತಹೀನತೆಯನ್ನು ತಡೆಗಟ್ಟುವದು. ಕಡಿಮೆ ತೂಕದ ಶಿಶುಗಳನ್ನು ಜನನ ಮಟ್ಟವನ್ನ ಕಡಿಮೆಗೊಳಿಸುವುದು.

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ – ಗಂಟಲು ಕ್ಯಾನ್ಸರ್‌ನ ಒಂದು ಭಾಗವಾಗಿದೆ ಜಾಗರುಕತೆ”



ಸೆಪ್ಟೆಂಬರ್ 4 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕೀಯಾದ ಶ್ರೀಮತಿ ಮಮತಾ ರವರು ಸಮುದಾಯ ಜನರಿಗೆ ಕ್ಯಾನ್ಸರ್ ಅಂತಹ ಕಾಯಿಲೆ ಎಂದು ಎಲ್ಲರಿಗೂ ತಿಳಿದಿದೆ. ಸಾಮಾನ್ಯವಾಗಿ ಅದನ್ನು ಪತ್ತೆ ಮಾಡಲು ಸಾಧ್ಯವಾಗುವುದಿಲ್ಲ, ಅದಕ್ಕಾಗಿಯೇ ಇಂದು ನಾವು ಗಂಟಲಿನ ಆರಂಭಿಕ ಲಕ್ಷಣಗಳನ್ನು ತಿಳಿಯೋಣ. ಅನೇಕ ಬಾರಿ ವ್ಯಕ್ತಿಯ ಗಂಟಲಿನಲ್ಲಿ ನೋವು ಇರುತ್ತದೆ ಮತ್ತು ಅದನ್ನು ಸಾಮಾನ್ಯ ನೋವು ಎಂದು ನಿರ್ಲಕ್ಷಿಸುತ್ತಾರೆ. ಆದರೆ ಇದು ಕ್ಯಾನ್ಸರ್‌ನ ಲಕ್ಷಣವು ಆಗಿರಬಹುದು. ಆದರೆ ಇವತ್ತಿಗೂ ತಿಳಿಯುವ ಹೊತ್ತಿಗೆ ಅದನ್ನು ತಡವಾಗುವ ಸಾಧ್ಯತೆ ಕೂಡ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕ್ಯಾನ್ಸರ್‌ನ ಸರಿಯಾದ ಸಮಯಕ್ಕೆ ಗುರುತಿಸುವುದು ಮತ್ತು ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡುವುದು ಅಗತ್ಯ. ಗಂಟಲು ಕ್ಯಾನ್ಸರ್‌ನ ಕೆಲವು ಆರಂಭಿಕ ಲಕ್ಷಣಗಳ ಮಾಹಿತಿ ನೋಡಬಹುದಾಗಿದೆ, ಮೊದಲನೇದಾಗಿ ಗಂಟಲಿನಲ್ಲಿ ತೊಂದರೆ:– ಇದು ಗಂಟಲು ಕ್ಯಾನ್ಸರ್‌ನ ಮೊದಲನೇ ಚಿಹ್ನೆಯಾಗಿದೆ. ಸಾಮಾನ್ಯವಾಗಿ ಜನರು ಆಹಾರವನ್ನು ತಿನ್ನಲು ಕಷ್ಟವಾಗದ ಮೃದು ಆಹಾರ ತಿನ್ನಲು ಪ್ರಯತ್ನಿಸುತ್ತಾರೆ. ಏಕೆಂದರೆ ಅಂತಹ ಸಮಸ್ಯೆ ಇದ್ದವರು ವೈದ್ಯರನ್ನ ಭೇಟಿ ಮಾಡಬೇಕು. ಎರಡನೇದಾಗಿ ಧ್ವನಿಯಲ್ಲಿ ಬದಲಾವಣೆ:– ಗಂಟಲಿನ ಕ್ಯಾನ್ಸರ್ ಇರುವವರ ಧ್ವನಿಯಲ್ಲಿ ಬದಲಾವಣೆ ಮತ್ತು ಗಂಟಲಿನಲ್ಲಿ ಕಡಿತ ದಂತಹ ಲಕ್ಷಣಗಳು ಇರುತ್ತವೆ. ನಿಮಗೆ ಕಿವಿ, ಗಂಟಲು ಮತ್ತು ತಲೆಯಲ್ಲಿ ನೋವು ದೀರ್ಘಕಾಲದ ವರೆಗೆ ಇದ್ದರೆ ಅದನ್ನು ನಿರ್ಲಕ್ಷಿಸಬೇಡಿ. ಇದು ಕೂಡ ಗಂಟಲಿನ ಕ್ಯಾನ್ಸರ್‌ನ ಆರಂಭಿಕ ಲಕ್ಷಣವಾಗಿದೆ ಕ್ಯಾನ್ಸರ್ ಬಂದ ನಂತರ ಗಂಟಲಿನ ಕ್ರಾಂತಿಯನ್ನು ಉಬ್ಬುತ್ತದೆ ಮತ್ತು ನೋಯಲು ಪ್ರಾರಂಭಿಸುತ್ತದೆ ಈ ಎಲ್ಲ ಲಕ್ಷಣಗಳು ವ್ಯಕ್ತಿಯ 3 ವಾರಗಳ ಮೇಲೆ ಹೆಚ್ಚಾಗಿ ಕಾಣಿಸಿದರೆ ವೈದ್ಯರನ್ನು ಸಂಪರ್ಕಿಸಬೇಕಾಗಿ ತಿಳಿಸಲಾಯಿತು. 22 ಜನರು ಗಂಟಲು ಕ್ಯಾನ್ಸರ್ ಲಕ್ಷಣದ ಸದುಪಯೋಗವನ್ನು ಪಡೆದುಕೊಂಡರು.

## “ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಚಟುವಟಿಕೆ”



ಸೆಪ್ಟೆಂಬರ್ 23 ರಂದು ಹುಮ್ನಾಬಾದ್ ತಾಲೂಕಿನ ಧೂಮ್ಮನ್ಸೂರ್ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ, ಮಾತು ಬರದೆ ಇರುವಂತಹ ಮಕ್ಕಳಿಗೆ ಉಪ ಕೇಂದ್ರದಲ್ಲಿ ಬಣ್ಣಗಳನ್ನು ಜೋಡಿಸುವದು, ಮಕ್ಕಳ ಜೊತೆ ಸೇರಿ ಆಟ ಆಡುವುದು, ಎರಡು ಅಕ್ಷರದಿಂದ ಹೊಂದಿರುವಂತಹ ಶಬ್ದಗಳನ್ನು, ಅಮ್ಮ, ಅಪ್ಪ ಹಾಗೂ ದೇಹದ ಭಾಗಗಳ ಹೆಸರು ಕಣ್ಣು, ಕಿವಿ, ಮೂಗು, ಅನ್ನೋ ಹಾಗೆ ಬಣ್ಣ ಬಣ್ಣದ ಹೆಸರು, ಕೆಂಪು ನೀಲಿ ಮತ್ತು ಹಣ್ಣುಗಳ ಹೆಸರು ಪ್ರಾಣಿಗಳ ಹೆಸರು ಹೇಳುವುದರ ಮುಖಾಂತರ ಚಟುವಟಿಕೆ ಮಾಡಿಸಲಾಯಿತು. ಮತ್ತು ಮನೆ ಆಧಾರಿತ ಚಟುವಟಿಕೆಯನ್ನು ಮಗುವಿನ ಕೈಯಿಂದಲೇ ಆಹಾರ ಸೇವನೆ ಮಾಡಿಸುವದು, ಬಟ್ಟೆ ಹಾಕೊಳ್ಳುವಂತದು, ಚಿಕ್ಕ ಚಿಕ್ಕ ಚಟುವಟಿಕೆಗಳನ್ನು ಮಕ್ಕಳ ಪೋಷಕರಿಗೂ ಜೊತೆ ಸೇರಿಸಿ ಚಟುವಟಿಕೆ ಮಾಡುವುದನ್ನು ಹೇಳಿಕೊಡಲಾಯಿತು. ಮಗುವಿಗೆ ದಿನನಿತ್ಯ ಚಟುವಟಿಕೆಗಳನ್ನು ಮಾಡಿಸುವುದರ ಜೊತೆಗೆ ಮಗುವಿನ ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಮಕ್ಕಳಿಗೆ ಮನವರಿಕೆ ಆಗುವಂತೆ ತಿಳಿಸಿ ಹೇಳಲಾಯಿತು. ಪೋಷಕರಿಗೆ ಕೂಡ ಮಕ್ಕಳೊಂದಿಗೆ ಹೆಚ್ಚಿನ ಸಮಯ ಕೊಡುವಂತೆ ಮಾಹಿತಿ ತಿಳಿಸಲಾಯಿತು. ಮಕ್ಕಳಿಗೆ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸ ಕಾರ್ಯಗಳನ್ನು ಅತ್ಯಂತ ಜಾಗರೂಕತೆಯಿಂದ ನ್ನಿಭಾಯಿಸುವುದು ಪಾಲಕರ ಕರ್ತವ್ಯವಾಗಿದೆ ಎಂದು ತಿಳಿಸಿ ಹೇಳಲಾಯಿತು.

## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

## “ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



16 ಸೆಪ್ಟೆಂಬರ್ 2025ರಂದು ಬೀದರ್ ತಾಲೂಕಿನ ಮೈಲೂರು ನಗರದ ಪ್ರಾಥಮಿಕ ಆರೋಗ್ಯ ಉಪಕೇಂದ್ರದಲ್ಲಿ ಶ್ರೀ. ನೋಹಾನ ರವರು ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮೊದಲಿಗೆ ಇವರನ್ನು ಸಂಸ್ಥೆವತಿಯಿಂದ ಅಭಿನಂದಿಸಿ ಮಾನಸಿಕ ಕಾಯಿಲೆಯ ಸಮೀಕ್ಷೆಯ ಕುರಿತು ತಿಳಿಸಲಾಯಿತು. ಯಾರಾದರೂ ಕೆಲಸದ ಸ್ಥಳಗಳಲ್ಲಿ ಹಾಗೂ ಮನೆಗಳಲ್ಲಿ ಮಾನಸಿಕ ಅಸ್ವಸ್ಥರಾಗಿದ್ದು ಕಂಡುಬಂದರೆ ಏನು ಮಾಡಬೇಕು, ಯಾರಿಗೆ ಮಾಹಿತಿ ನೀಡಬೇಕು ಹಾಗೂ ಸರಕಾರದಿಂದ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ಹೇಗೆ ಪಡೆಯಬೇಕು ಎಂದು ತಿಳಿಸಲಾಯಿತು. ಹೆಚ್ಚಿನ ಮಾಹಿತಿಗಾಗಿ ಹಾಗೂ ಮಾರ್ಗದರ್ಶನಕ್ಕಾಗಿ ಆಬೀಟ್ ಸದಾ ತಮ್ಮ ಜೊತೆ ಇರುವುದು ಎಂದು ಆಶ್ವಾಸನೆ ನೀಡಲಾಯಿತು. ಈ ಒಂದು ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮದಲ್ಲಿ ಸಿಹೆಚ್‌ಓ, ಪಿಹೆಚ್‌ಸಿಓ, ಹೆಚ್‌ಐಓ ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ಎಲ್ಲರೂ ಸೇರಿ ಒಟ್ಟು 14 ಜನ ಭಾಗವಹಿಸಿದರು.

## “ಆರೋಗ್ಯ ಸಮಸ್ಯೆಗಳಲ್ಲಿದ್ದ ಫಲಾನುಭವಿಗೆ ದೇಹ ತಪಾಸಣೆ”



23 ಸೆಪ್ಟೆಂಬರ್ 2025ರಂದು ಶ್ರೀಮತಿ. ಸುಜಾತ ರವರು ಮಾನಸಿಕ ಅಸ್ವಸ್ಥತೆಯಿಂದ ಫಲಾನುಭವಿ ಅನೇಕ ದಿನಗಳಿಂದ ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಗಮನಿಸಿ. ಅವರನ್ನು ದೇಹ ತಪಾಸಣೆಗೆ ಕರೆದುಕೊಂಡು ಹೋಗಲಾಯಿತು. ಹಾಗೂ ಇವರಿಗೆ ದಂತ ಚಿಕಿತ್ಸೆಯನ್ನು ಮಾಡಿಸಲು ಹಲ್ಲಿನ ಸಮಸ್ಯೆಯನ್ನು ಗುರುತಿಸಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಕುಟುಂಬದ ಸದಸ್ಯರು ಸಂಸ್ಥೆಗೆ ಧನ್ಯವಾದಗಳನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಸಂಸ್ಥೆಯನ್ನು ಪ್ರಶಾಂಶಿಸಿದರು.

## “ಆರೈಕೆದಾರರ ಸಭೆ”



06 ಸೆಪ್ಟೆಂಬರ್ 2025ರಂದು ಔರಾದ್ ತಾಲೂಕಿನ ಕೊಲ್ಲೂರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಲಿವ.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತೆಯಾದ ಶ್ರೀಮತಿ ದೀಪಿಕಾರವರು ಆರೈಕೆದಾರರ ಸಭೆಯನ್ನು ಮಾಡಿ ಈ ಕೆಳಕಂಡ ವಿಷಯಗಳ ಕುರಿತು ಚರ್ಚೆ ಮಾಡಲಾಯಿತು. ಆರೋಗ್ಯ ಸುಧಾರಣೆಯ ಬಗ್ಗೆ ಚರ್ಚೆ, ಸ್ವ ಆರೋಗ್ಯದ ಪ್ರಾಮುಖ್ಯತೆ, ಲಭ್ಯವಿರುವ ಸರ್ಕಾರದ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. ನಂತರ ಅವರ ಸಮಸ್ಯೆಗಳ ಬಗ್ಗೆ ಹಾಗೂ ನಡೆಯುತ್ತಿರುವ DMHP ಶಿಬಿರ ಹಾಗೂ ದೊರೆಯುತ್ತಿರುವ ಔಷಧಿಗಳ ಪರಿಶೀಲಿಸಿ ಅವರಿಗೆ ಆರೈಕೆ ದಾರರ ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ವಿವರ ನೀಡಲಾಯಿತು. ಈ ಸಭೆಯಲ್ಲಿ ಒಟ್ಟು 9 ಜನರು ಸೇರಿದ್ದರು.



04 ಸೆಪ್ಟೆಂಬರ್ 2025ರಂದು ಬೀದರ್ ತಾಲೂಕಿನ ಚಾಂಬೋಳ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಮೊದಲಿಗೆ ಎಲ್ಲಾ ಆರೈಕೆದಾರರ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು. ಆರೈಕೆದಾರರ ಸಭೆಯ ಮುಖ್ಯ ಉದ್ದೇಶ, ಎಲ್ಲರೂ ಒಗ್ಗಟ್ಟಿನಿಂದ ಕೂಡುವುದು, ಪರಸ್ಪರ ಬೆಂಬಲ ನೀಡುವುದು, ಅನುಭವಗಳನ್ನು ಹಂಚಿಕೊಳ್ಳುವುದು, ಮಾನಸಿಕ ಅಸ್ವಸ್ಥರ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ವಿಷಯಗಳನ್ನು ಚರ್ಚಿಸುವುದು ಎಂದು ಈ ಸಭೆಯ ಮುಖ್ಯ ಉದ್ದೇಶವನ್ನು ತಿಳಿಸಲಾಯಿತು. ಈ ಸಭೆಯಲ್ಲಿ ಪಾಲ್ಗೊಂಡಿದ್ದವರು ತಮ್ಮ ಮನೆಯ ಪರಿಸ್ಥಿತಿಯ ಬಗ್ಗೆ ಹಂಚಿಕೊಂಡರು. ಇವರಲ್ಲಿ ಇಬ್ಬರು ಸಂಸ್ಥೆಯಿಂದ ನೀಡಲಾದ ಕುರಿಗಳ ಕೆಲಸದಿಂದ ತಮ್ಮ ಜೀವನ ಹೇಗೆ ಬೆಳೆದಿದೆ ಎಂದು ಹಂಚಿಕೊಂಡರು. ಈ ಸಭೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಎಚ್‌ಓ ಮತ್ತು ಪಿಹೆಚ್ ಸಿಓ ಎಚ್‌ಐಓ ಹಾಗೂ ವಿರ್‌ಡಬ್ಲ್ಯೂ ಮತ್ತು ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 12 ಜನರು ಭಾಗವಹಿಸಿದರು.



10 ಸೆಪ್ಟೆಂಬರ್ 2025ರಂದು ಭಾಲ್ಕಿ ತಾಲೂಕಿನ ಮದಕಟಿ ಗ್ರಾಮದಲಿ ಲಿವ.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕಲ್ಪನಾ ರವರು ಆರೈಕೆದಾರರ ಸಭೆಯನ್ನು ಮಾಡಿ ಈ ಕೆಳಗಿನ ವಿಷಯಗಳ ಬಗ್ಗೆ ತಿಳಿಸಲಾಯಿತು. ಆರೋಗ್ಯ ಸುಧಾರಣೆ, ಚಿಕಿತ್ಸೆಯ ಪ್ರಾಮುಖ್ಯತೆ, ಸರ್ಕಾರಿ ಸೌಲಭ್ಯಗಳ ಮಾಹಿತಿ ಮತ್ತು ಸಂಪೂರ್ಣ ಆರೋಗ್ಯ ಸಮತೋಲನ. ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೂ ಸಮಾಜದಲ್ಲಿ ಮುಖ್ಯ ವಾಹಿನಿಗೆ ತರುವ ಭರವಸೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 10 ಫಲನುಭವಿಗಳು ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮ”



08 ಸೆಪ್ಟೆಂಬರ್ 2025ರಂದು ಹುಲಸೂರ ತಾಲೂಕಿನ ಮುಚಳಂಬ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಲಿವ.ಲವ್.ಲಾಫ್ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗದವರಿಗೆ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮ ಕುರಿತು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಮಹಾದೇವ ರವರು ಮಾನಸಿಕ ಕಾಯಿಲೆ ಅದರ ಪರಿಣಾಮಗಳು, ಮಾನಸಿಕ ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಯ ಆಲೋಚನೆಗಳು, ಭಾವನೆಗಳಲ್ಲಿ ಆಗುವ ಏರುಪೇರುಗಳು, ವಿಚಿತ್ರ ನಡವಳಿಕೆಗಳ ಕುರಿತು ತಿಳಿಸಲಾಯಿತು. ಮಾನಸಿಕ ಕಾಯಿಲೆ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಸಂಸ್ಥೆ ವತಿಯಿಂದ ಹೇಗೆ ದೂರ ಮಾಡಲಾಗುತ್ತಿದೆ ಎಂಬುದರ ಮಾಹಿತಿ ನೀಡಲಾಯಿತು ಹಾಗೂ ಮುಚ್ಚಲಂಬ ಗ್ರಾಮದಲ್ಲಿ ಪತ್ತೆ ಹಚ್ಚಲಾಗಿರುವ ಮಾನಸಿಕ ಅಸ್ವಸ್ಥರ ಮಾಹಿತಿ ತಿಳಿಸಲಾಯಿತು. ಅದೇರೀತಿ ಗ್ರಾಮ ಪಂಚಾಯತ್ ಸಹಕಾರ, ಬೆಂಬಲ ನೀಡಲು ವಿನಂತಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಪಿಡಿಓ, ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹೀಗೆ ಒಟ್ಟು 18 ಜನರು ಹಾಜರಿದ್ದರು.

## “ಮಾನಸಿಕ ಆರೋಗ್ಯ ಸಮಸ್ಯೆಗಳು, ಸಮುದಾಯದೊಳಗೆ ಧನಾತ್ಮಕ ವಿಚಾರ”



04 ಸೆಪ್ಟೆಂಬರ್ 2025ರಂದು ಬೀದರ್ ತಾಲೂಕಿನ ಮಲ್ಕಾಪುರ ಗ್ರಾಮದ ಪಂಚಾಯತನಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ. ಅರುಣ್ ರವರು ಸದಸ್ಯರಿಗೆ ಈ ವಿಷಯಗಳ ಕುರಿತು ತಿಳಿಸಲಾಯಿತು. ಮಾನಸಿಕ ಆರೋಗ್ಯ ಸಮಸ್ಯೆಗಳು, ಸಮುದಾಯದೊಳಗೆ ಧನಾತ್ಮಕ ಮಾನಸಿಕ ಆರೋಗ್ಯ ಅಭ್ಯಾಸಗಳನ್ನು ಉತ್ತೇಜಿಸುವುದು, ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಹಾಗೂ ಬೆಂಬಲ, ಆರೋಗ್ಯ ಸಂಪನ್ಮೂಲಗಳ ಬಳಕೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ (DMHP) ಉಚಿತ ತಪಾಸಣೆ, ಆಪ್ತಸಮಾಲೋಚನೆ ಮತ್ತು ಮಾತ್ರೆಗಳ ಸೌಲಭ್ಯ. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, PDO ಮತ್ತು ಸದಸ್ಯರು ಸೇರಿ ಒಟ್ಟು 10 ಜನ ಭಾಗವಹಿಸಿದರು.

## “ವಿಶೇಷ ವಿಕಲಚೇತನರ ಸಭೆ”



11 ಸೆಪ್ಟೆಂಬರ್ 2025ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟಾ ಗ್ರಾಮದಲ್ಲಿ ವಿಶೇಷ ವಿಕಲಚೇತನರ ಸಭೆ ಮಾಡಲಾಯಿತು. ಈ ಸಭೆಯಲ್ಲಿ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ವಿಶೇಷ ಚೇತನರಿಗೆ ಸರ್ಕಾರದಿಂದ ಯುಡಿ ಐಡಿ ಕಾರ್ಡ್ ಮತ್ತು ಮಾಸಿಕ ವೇತನ ಪಡೆಯುವ ವಿಧಾನ, ಪ್ರತಿಶತ 75% ವಿಶೇಷ ಚೇತನರ ಪಾಲಕರಿಗೆ ಪೋಷಣೆ ಭತ್ಯೆ ವಿಶೇಷ ಚೇತನರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚೆ ನಡೆಸಲಾಯಿತು. ಪ್ರತಿಶತ 50% ಇರುವ ವಿಶೇಷ ಚೇತನರಿಗೆ ಆಧಾರ್ ಯೋಜನೆ ಅಡಿ ಸಾಲಸೌಲಭ್ಯ, ಬಸ್‌ಪಾಸ್ ಸೌಲಭ್ಯ ಇವೆಎಂದು ತಿಳಿಸಲಾಯಿತು. ಈ ಸಭೆಯಲಿ ಗ್ರಾಮ ಪಂಚಾಯತ್ VRW ಮತ್ತು ವಿಶೇಷ ಚೇತನರು ಭಾಗವಹಿಸಿ ಮಾಹಿತಿಯನ್ನು ಪಡೆದರು. ಸಭೆಯಲ್ಲಿ ಒಟ್ಟು 10 ಜನರು ಭಾಗವಹಿಸಿದ್ದರು.

## “ಮಾನಸಿಕ ಅರೋಗ್ಯವು ದೇಹದ ಅರೋಗ್ಯ ಕಿಂತಲು ಬಹಳ ಮುಖ್ಯ”



13 ಸೆಪ್ಟೆಂಬರ್ 2025ರಂದು ಭಾಲ್ಕಿ ತಾಲೂಕಿನ ತಾರನಳಿ ಗ್ರಾಮದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ.ಲವ್.ಲಾಫ್ ಫೌಂಡೇಶನ್ ಇವರ ಸಹಯೋಗದಲ್ಲಿ ನಡೆದ ಕಾರ್ಯಕ್ರಮವನ್ನು ಕಾರ್ಯಕರ್ತೆ ಬಸವಜ್ಯೋತಿ ನಡೆಸಿಕೊಟ್ಟರು. “ಮಾನಸಿಕ ಅರೋಗ್ಯವು ದೇಹದ ಅರೋಗ್ಯ ಕಿಂತಲು ಬಹಳ ಮುಖ್ಯ” ಎಂಬ ಶೀರ್ಷಿಕೆಯೊಂದಿಗೆ ಆರಂಭವಾಯಿತು. ಕಾರ್ಯಕ್ರಮದಲ್ಲಿ – ಖಿನ್ನತೆ, ಆತಂಕ, ಭಯ ಕುರಿತು ಮಾಹಿತಿ, ಸಮಸ್ಯೆಗಳನ್ನು ಹೇಗೆ ಬೇಗ ಗುರುತಿಸುವುದು, ಸಮಯಕ್ಕೆ ಚಿಕಿತ್ಸೆ ಪಡೆಯುವ ಮಹತ್ವ, ಮೂಢನಂಬಿಕೆಗಳ ಕುರಿತು ಮಾಹಿತಿ ನೀಡಲಾಯಿತು. ಹಲ್ಬರ್ಗಾ ಆಸ್ಪತ್ರೆಯ ಉಚಿತ ತಪಾಸಣಾ ಶಿಬಿರಗಳ ಮಾಹಿತಿ ಹಂಚಲಾಯಿತು. ಒಟ್ಟು 10 ಜನರು ಭಾಗವಹಿಸಿ ಜಾಗೃತಿ ಕಾರ್ಯಕ್ರಮವನ್ನು ಯಶಸ್ವೀ ಗೊಳಿಸಲಾಯಿತು.

## “ಆಶಾ ಕಾರ್ಯಕರ್ತೆಯರ ಬಲವರ್ಧನೆ ಕಾರ್ಯಕ್ರಮ”



24 ಸೆಪ್ಟೆಂಬರ್ 2025ರಂದು ಬೀದರ್ ತಾಲೂಕಿನ ಕಮಠನಾ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ವತಿಯಿಂದ ಶ್ರೀ. ಅಭಿಷೇಕ್ ರವರು ಆಶಾ ಕಾರ್ಯಕರ್ತೆಯರ ಬಲವರ್ಧನೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ಮಾನಸಿಕ ಆರೋಗ್ಯ ಕಾರ್ಯಕ್ರಮ ಕುರಿತು ಮತ್ತು ಸಮುದಾಯದಲ್ಲಿ ಆರೋಗ್ಯ ಕೇಂದ್ರದ ಪಾತ್ರದ ಕುರಿತು ಸಂಭಾಷಣೆ ಮಾಡಲಾಯಿತು. ಆಶಾ ಕಾರ್ಯಕರ್ತೆಯರು ಮತ್ತು ಗ್ರಾಮೀಣ ಪೂನರ್ವಸತಿ ಕಾರ್ಯಕರ್ತರು ಸಂಘ ಸಂಸ್ಥೆಗಳ ಸಹಯೋಗದ ಪ್ರಯತ್ನಗಳ ಮೂಲಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಹಾಗೂ ಬೆಂಬಲವನ್ನು ಹೇಗೆ ನೀಡುವುದು ಎನ್ನುವ ಮಾಹಿತಿ ನೀಡಲಾಯಿತು. ಈ ತರಬೇತಿಯಲ್ಲಿ ಒಟ್ಟು 35 ಆಶಾ ಕಾರ್ಯಕರ್ತೆಯರು ಭಾಗವಹಿಸಿದರು.

## “ಎಂಟು ವರ್ಷದಿಂದ ನಡೆಯಲು ಸಾಧ್ಯವಾಗದೆ ಇರುವಲ್ಲಿ ಆರ್ಬಿಟ್ ಸಂಸ್ಥೆಯಿಂದ ದ್ವಿಚಕ್ರ ವಾಹನ”

ಬಸವಕಲ್ಯಾಣ ತಾಲೂಕಿನ ಚೌಕಿವಾಡಿ ಗ್ರಾಮದಲ್ಲಿ ವಿಶೇಷ ಚೇತನ ಇರುವ ವ್ಯಕ್ತಿಗೆ ಆರ್ಬಿಟ್ ಸಂಸ್ಥೆಯ ಕಡೆಯಿಂದ ದ್ವಿಚಕ್ರ ವಾಹನ ನೀಡಲಾಗಿತ್ತು. ಅವರು ಕಳೆದ ಎಂಟು ವರ್ಷದಿಂದ ನಡೆಯಲು ಸಾಧ್ಯವಾಗದೆ ಮನೆಯಲ್ಲಿ ಮಾತ್ರ ಇರುತ್ತಿದ್ದರು. ಈಗ ಈ ದ್ವಿಚಕ್ರದಿಂದ ಅಕ್ಕಪಕ್ಕ ಓಡಾಡುವ ಹಾಗೂ ಜನರನ್ನು ಭೇಟಿ ಮಾಡುವ ಸೌಭಾಗ್ಯವನ್ನು ಸಂಸ್ಥೆಯು ಕಲ್ಪಿಸಿದೆ. ಇದರಿಂದ ಮಗಳಿಗೆ ಒಂದು ಹೊಸಜೀವನ ಲಭಿಸಿದೆ ಎಂದು ಫಲಾನುಭವಿಯ ತಂದೆಯವರು ಹರ್ಷವ್ಯಕ್ತಪಡಿಸಿ ಆರ್ಬಿಟ್ ಸಂಸ್ಥೆಗೆ ಧನ್ಯವಾದ ವ್ಯಕ್ತಪಡಿಸುತ್ತಾರೆ.



## “ಮಾನಸಿಕ ಅಸ್ವಸ್ಥರಿಗೆ ಮತ್ತು ಸಹಾಯ ಮಾರುವ ಪಾಲಕರಿಗೆ ಆಪ್ತ ಸಮಾಲೋಚನೆ”

ಬೀದರ್ ತಾಲ್ಲೂಕಿನ ಕಾರ್ಯಕರ್ತೆಯಾದ ಶ್ರೀಮತಿ ಪ್ರಿಯ ರವರು ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿಯವರ ಜೊತೆ ಗೂಡಿ ಫಲಾನುಬವಿಯ ಮನೆ ಭೇಟಿಮಾಡಿ ಅವರಿಗೆ ಚಿಕಿತ್ಸೆಯ ಮಹತ್ವವನ್ನು ತಿಳಿಸಿದರು. ಕೆಲವು ನೈಜ ಘಟನೆಗಳನ್ನು ವಿಶ್ಲೇಷಿಸಿ ಮನವರಿಕೆ ಮಾಡಲಾಯಿತು. ಕುಟುಂಬದ ಹಿರಿಯರನ್ನು ಪ್ರತ್ಯೇಕವಾಗಿ ಭೇಟಿಮಾಡಿ ಮಾನಸಿಕ ಅಸ್ವಸ್ಥಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ಹೇಗೆ ಕೆರೆತರಬಹುದು ಎಂಬುದರ ಮಾಹಿತಿ ನೀಡಿ ಅವರ ಒಪ್ಪಿಗೆ ಪಡೆಯಲಾಯಿತು.





ಇಸ್ಲಾಮಾಪುರದ ಭಾಗ್ಯಶ್ರೀ ಎಂಬುವರಿಗೆ ಸಂಸ್ಥೆಯ ಆಪ್ತಸಮಾಲೋಚಕರಾದ ಶ್ರೀಮತಿ ರೂಪಾಲಿಯವರು ಗುಪ್ತವಾಗಿ ಸಮಾಲೋಚಿಸಿ ಅವರ ಆರೋಗ್ಯದ ಪ್ರಾಮುಖ್ಯತೆ ಹಾಗೂ ಅದನ್ನು ಒಪ್ಪಿಕೊಳ್ಳುವ ಕುರಿತು ತಿಳಿಸಿಕೊಟ್ಟರು. ಹಾಗೂ ಅವರ ಹಾಗೂ ಕುಟುಂಬದ ಆತಂಕ, ದುಃಖ, ನೋವುಗಳ ಕೇಳಿ ಅವರಿಗೆ ಭರವಸೆಯ ಮಾತುಗಳನ್ನು ಆಡಿ ಜೀವನದಲ್ಲಿ ಮುಂದುವರೆಯಲೂ ಪ್ರೋತ್ಸಾಹಿಸಿದರು.

## “ಮಾನಸಿಕ ಅಸ್ವಸ್ಥರ ಪತ್ತೆ ಹಚ್ಚುವದಕಾಗಿ ಮನೆ ಸಮೀಕ್ಷೆ”

ಶ್ರೀಮತಿ ಲಕ್ಷ್ಮಿಯವರು ಹಾಲಹಳ್ಳಿ ಗ್ರಾಮದ ಅಂಗನವಾಡಿ ಭೇಟಿನೀಡಿ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಮಾಹಿತಿ ನೀಡಲಾಗಿದೆ. ಹಾಗೂ ಅವರ ಸಹಕಾರ ಕೋರಲು ಆ ಗ್ರಾಮದ ಮಾನಸಿಕವಾಗಿ ಅಸ್ವಸ್ಥಗೊಂಡ ಹಾಗೂ ಸ್ಪಂದಿಸದ ಮನೆ ಭೇಟಿ ಮಾಡಲು ಹಾಗೂ ಅವರನ್ನು ಮನ ಒಲಿಸಲು ಮುಂದಾಗಿದ್ದಾರೆ. ಹಾಗೂ ನಮಗೆ ಬೇಕಾದಂತಹ ಮಾಹಿತಿ ನೀಡಿ ಸಹಕರಿಸಲು ಮುಂದಾಗಿದ್ದಾರೆ.





ಲಿವ.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಸಾಗರ್‌ರವರು ಮಾನಸಿಕ ಅಸ್ವಸ್ಥರಾಗಿದ್ದು ಚಿಕಿತ್ಸೆಗೆ ಬಾರದಿರುವ ವ್ಯಕ್ತಿಗಳ ಭೇಟಿ ನೀಡಲೂ ಅವರ ಪ್ರಯಾಣ ವೆಚ್ಚದ ಸಮಸ್ಯೆಯನ್ನು ಕಂಡುಕೊಂಡು ನಮ್ಮ ಸಂಸ್ಥೆವತಿಯಿಂದ ಚಿಕಿತ್ಸೆಗಾಗಿ ಪ್ರಯಾಣ ದರವನ್ನು ತುಂಬಲಾಗವುದು ಎಂದು ಅವರಲ್ಲಿ ವಿಶ್ವಾಸ ತುಂಬಲಾಯಿತು. ಹಾಗೂ ಅವರ ಮಾಸಿಕ ಪಿಂಚಣಿ ಬಾರದಿರುವ ಕುರಿತು ಮಾಹಿತಿ ಸಂಗ್ರಹಿಸಲಾಯಿತು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯ್ರಮ"



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ತಾರಾಫೈಲ್ ಏರಿಯಾದ ಅಂಗನವಾಡಿ ಕೇಂದ್ರ 4ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಮಾಹಿತಿಯನ್ನು ಕು. ಅನಿತಾಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳ ಅಂದರೆ ಹೇಗೆ ಇರುತ್ತಾರೆ. ಆ ಮಕ್ಕಳ ನ್ಯೂನತ್ತೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆಯಿಂದ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೂರಕಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತಿಳಿಸಲಾಯಿತು. ಹಾಗೂ ಪೌಷಿಕ ಆಹಾರದ ಕುರಿತು ಮಹಿಳೆಯರು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 15 ಜನ ಭಾಗವಹಿಸಿದ್ದರು. ಅಂಗನವಾಡಿ ಕಾರ್ಯಕರ್ತೆಯರ ಶ್ರೀಮತಿ ಗೌಷಿಯಾಬೇಗ ಉಪಸ್ಥಿತರಿದ್ದರು.

## "ದೈಹಿಕ ಮೌಲ್ಯಮಾಪನ ಸಾಧನ ಸಲಕರಣೆಗಳ ಉಪಯೋಗ"



ಸೆಪ್ಟೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಮತ್ತು ಸಖ್ಯಾ ಸಂಸ್ಥೆಯ ಸಂಯೋಗದ ಅಡಿಯಲ್ಲಿ ಮಕ್ಕಳಿಗೆ ದೈಹಿಕ ಮಾಪನ ಮಾಡಿ ಅವರಿಗೆ ಅನುಕೂಲ ರೀತಿಯಲ್ಲಿ ಸಾಧನ ಸಲಕರಣೆಗಳ ಮೌಲ್ಯಮಾಪನವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಸಂಪನ್ಮೂಲ ವೆಕ್ತಿಗಳಾದ ಖಾಜಾ ಹುಶೇನ್ ಸರ್ ಸಖ್ಯಾ ಸಂಸ್ಥೆಯ ಭೌತಿಕ ತಜ್ಞರು, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ತಾಪಕರಾದ ಶ್ರೀಮತಿ ಶ್ವೇತಾಮೇಡಂ ಮಾತನಾಡಿ ಈ ಸಂಸ್ಥೆಯ ಮೂಲಕ ನಮಗೆ ಈ ಭಾಗದ ಬೆಳವಣಿಗೆಯಲಿ ಇರುವ ಕುಂಠಿತ ಮಕ್ಕಳಿಗೆ ಸಾಧನೆ ಸಲಕರಣೆಗಳ ಮೂಲಕ ನೀಡುವುದರ ಮಕ್ಕಳ ಬದಲಾವಣೆ ನಿಟ್ಟನಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದರ ಪದುಪಯೋಗವನ್ನು ಪೋಷಕರು ಪಡೆದುಕೊಳ್ಳಿ ಎಂದು ಹೇಳಿದರು. ಈ ಒಂದು ಕಾರ್ಯಕ್ರಮದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## "ಬೆಳವಣಿಗೆ ಕುಂಠಿತವಿರುವವರ ಕುರಿತು ಅರಿವಿನ ಕಾರ್ಯಕ್ರಮ"



19 ಸೆಪ್ಟೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಬೆಳವಣಿಗೆ ಕುಂಠಿತವಿರುವವರ ಕುರಿತು ಕಲ್ಬುರ್ಗಿ ನಗರದ ದೇವಿನಗರ ಏರಿಯಾದ ಎರಡನೆ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಅವರು 11 ಜನ ಮಹಿಳೆಯರಿಗೆ ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.

## "ಸ್ವ-ಉದ್ಯೋಗ ಮಾಡುವದರ ಬಗ್ಗೆ ಮಾಹಿತಿ"



18 ಸೆಪ್ಟೆಂಬರ್ 2025ರಂದು ಕಲಬುರ್ಗಿ ತಾಲೂಕಿನಲ್ಲಿ ಬರುವ ನಂದಿಕೂರು ಗ್ರಾಮಕ್ಕೆ ಸೇವಾಸಂಗಮ ಸಂಸ್ಥೆಯಿಂದ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕೀಯಾದ ಶ್ರೀಮತಿ ಇಂದುರವರು ಶ್ರೀಲಕ್ಷ್ಮಿ ಸಂಘದ ಸದಸ್ಯರಿಗೆ ಸಮೃದ್ಧಿಲೋನ ಬಗ್ಗೆ ಮಾಹಿತಿ ನೀಡಿದರು. ಸ್ವ-ಉದ್ಯೋಗ ಮಾಡುವದರ ಬಗ್ಗೆ ಮಾಹಿತಿ ನೀಡಲಾಯಿತು. ಸಂಘದಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಂಡು ಶ್ರೀಮತಿ ಕೀರ್ತಿರವರು ಸಮೃದ್ಧಿಲೋನ್ 35000 ಪಡೆದುಕೊಂಡು ಬಟ್ಟೆ ಹೊಲೆಯುವ ಯಂತ್ರವನ್ನು ಖರೀದಿ ಮಾಡಿ ತಮ್ಮ ಮನೆಯಲ್ಲಿ ಟೈಲರಿಂಗ್ ಅಂಗಡಿಯನ್ನು ಇಟ್ಕೊಂಡು ಮಹಿಳೆಯರ ಉಡುಪುಗಳನ್ನು ಹೊಲೆಯುತ್ತಿದ್ದಾರೆ. ಒಂದು ತಿಂಗಳಿಗೆ 7000 ಸಾವಿರರಿಂದ 8000ಸಾವಿರ ರೂಪಾಯಿ ಲಾಭದಾಯಕವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ವ್ಯಕ್ತಪಡಿಸಿದ್ದಾರೆ.

22 ಆಗಸ್ಟ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ 12

## “ಪೌಷ್ಟಿಕ ಆಹಾರದ ಕುರಿತು ಗರ್ಭಿಣಿ ಮಹಿಳೆಯರಿಗೆ ಅರಿವು”



ಸೆಪ್ಟೆಂಬರ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ತಿಲ್ಗೂಲ್ಗಾ ಗ್ರಾಮದಲ್ಲಿ ಬರುವ ಅಂಗನವಾಡಿ ಕೇಂದ್ರದಲ್ಲಿ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಪೌಷ್ಟಿಕ ಆಹಾರದ ಕುರಿತು ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಯಾವರೀತಿಯಾಗಿ ಸೇವನೆ ಮಾಡಬೇಕು ಎಂಬುದರ ಕುರಿತು ಈರೀತಿಯಾಗಿ ಹೇಳಲಾಯಿತು, ಗರ್ಭಿಣಿಯರು ಉತ್ತಮವಾದ ಆಹಾರವನ್ನು ಸೇವನೆ ಮಾಡಬೇಕು. ಏಕೆಂದರೆ ಮಗುವಿನ ಆರೋಗ್ಯಸ್ಥಿತಿಯು ಉತ್ತಮವಾಗಿ ಇರುತ್ತದೆ ಗರ್ಭಿಣಿ ಮಹಿಳೆಯರು ಹಸಿತರಕಾರಿಗಳು ಪೌಷ್ಟಿಕ ಅಂಶವುಳ್ಳ ಕಾಳುಗಳನ್ನು ಸೇವನೆಮಾಡಬೇಕು ಮತ್ತು ಹಾಲು ಮತ್ತು ಮೊಟ್ಟೆಯನ್ನು ಸೇವನೆ ಮಾಡಬೇಕು, ಮೂರು ತಿಂಗಳಿಂದ ಮತ್ತು 9 ತಿಂಗಳವರೆಗೆ ಗರ್ಭಿಣಿ ಮಹಿಳೆಯರು ಎಚ್ಚರ ‘ವಹಿಸಬೇಕು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿಅವರು ಮಾಹಿತಿ ತಿಳಿಸಿದರು ಈ ಒಂದು ಕಾರ್ಯಕ್ರಮದಲ್ಲಿ 12 ಜನರು ಭಾಗವಹಿಸಿದರು.

## “ಬಾಲ್ಯ ವಿವಾಹದ ಕುರಿತು ಜಾಗೃತಿ ಕಾರ್ಯಕ್ರಮ”



15 ಸೆಪ್ಟೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ ಸಂಯೋಗದಲ್ಲಿ ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತ ಆಶಯದಲ್ಲಿ ಕಲ್ಬುರ್ಗಿ ತಾಲೂಕಿನ ಸಾವಳಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಬಾಲ್ಯ ವಿವಾಹದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಬಾಲ್ಯ ವಿವಾಹ ಎಂದರೆ ಚಿಕ್ಕವಯಸ್ಸಿನಲ್ಲಿ ಹುಡುಗ – ಹುಡಗಿಯನ್ನು ಎರಡು ಕುಟುಂಬಗಳು ಸೇರಿ ಒಪ್ಪಿ ಮದುವೆ ಮಾಡುವುದು. ಬಾಲ್ಯ ವಿವಾಹವು ಸಾಮಾಜಿಕ ಪಿಡುಗೆಂದು ಪರಿಗಣಿಸುವುದರ ಮೂಲಕ ಶಿಕ್ಷಾರ್ಹ ಅಪರಾಧವೆಂದು ತಿಳಿಸಿದರು. 12 ತರಗತಿಯ ವಿದ್ಯಾರ್ಥಿನಿಯರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ತಿಳಿಸಿದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ”



13 ಸೆಪ್ಟೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ರಾಘವೇಂದ್ರ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತಹಂತವಾಗಿ ಕಡಿಮೆ ಮಾಡಬಹುದು ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆ ಎಂದು ಶ್ರೀಮತಿ ಶಿವಕಾಂತ ಅವರು ಮಾಹಿತಿ ತಿಳಿಸಿದರು. ಅಂಗನವಾಡಿ ಮೇಲ್ವಿಚಾರಕಿಯಾದ ನಾಗಮ್ಮ ಮತ್ತು ಎಂಟು ಜನ ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## “ಮಕ್ಕಳಿಗೆ ದೈಹಿಕವಾಗಿ ಚಲನವಲನಗಳ ಮೂಲಕ ಏಕಾಗ್ರತೆ ತರುವುದಕ್ಕಾಗಿ ತರಬೇತಿ”



ಸೆಪ್ಟೆಂಬರ್ 02ರಿಂದ 05 ರ ವರೆಗೆ ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ಪ್ರೇಮ್ಜಿ ಅವರ ಸಂಯೋಗದಲ್ಲಿ ಸಿಬ್ಬಂದಿ ವರ್ಗದವರಿಗೆ ಐದು ದಿನದ ತರಬೇತಿಯನ್ನು ಬೆಂಗಳೂರಿನ ಸಾಕ್ಯ ಫೌಂಡೇಶನ್ನಲ್ಲಿ ತರಬೇತಿ ಆಯೋಜಿಸಲಾಗಿತ್ತು, ಸಾಕ್ಯ ಸಂಸ್ಥೆ ನಿರ್ದೇಶಕರಾದ ಡಾಕ್ಟ ದಿವ್ಯ ಕಾರ್ತಿಕ್ ಅವರು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಗುರುತಿಸಿ ಯಾವರೀತಿ ಚಟುವಟಿಕೆ ನೀಡುತ್ತಾ ಬಂದಿದ್ದೇವೆ ಎಂದು ಸಂಸ್ಥೆಯ ಕುರಿತು ಸಂಕ್ಷಿಪ್ತಮಾಹಿತಿ ನೀಡಿದರು. ಮೊದಲನೆಯದಾಗಿ ಮಕ್ಕಳಿಗೆ ದೈಹಿಕವಾಗಿ ಚಲನವಲನಗಳ ಮೂಲಕ ಯಾವರೀತಿ ತರಬೇತಿಗಳನ್ನು ನೀಡಿ ಏಕಾಗ್ರತೆ ತರುವುದಕ್ಕಾಗಿ ಮಕ್ಕಳಿಗೆ ಚಟುವಟಿಕೆ ಮೂಲಕ ತರಬೇತಿ ನೀಡಿದರು. ನಂತರ ವಾಕ್ಷ ಟುವಟಿಕೆಗಳ ಯಾವಯಾವ ಚಟುವಟಿಕೆಗಳನ್ನು ನೀಡಬೇಕು ತಂತ್ರಗಳನ್ನು ಉಪಯೋಗಿಸಿ ಮಾತು ಬರಲು ಯಾವವಿಧಾನಗಳಿವೆ ಎನ್ನುವುದನ್ನು ವಿವರಣೆಯ ಮೂಲಕ ತಿಳಿಸಿದರು. ಪ್ರಾಯೋಗಿಕವಾಗಿ ಪೂರ್ವ ಸಿದ್ಧತೆಯ ಸ್ಕಿಲ್ ಮಕ್ಕಳಿಗೆ ಯಾವ ವಯಸ್ಸಿನಲ್ಲಿ ಪ್ರಾರಂಭಿಸಬೇಕು. ಬೆಳವಣಿಗೆ ಯಾವರೀತಿ ತಂತ್ರಗಳ ಮೂಲಕ ಚಟುವಟಿಕೆಗಳನ್ನು ಅವರಿಗೆ ನೀಡಬೇಕು ಎನ್ನುವುದರ ಕುರಿತು ಮಾಹಿತಿ ನೀಡಿದರು. ಇದರ ಜೊತೆಗೆ ಸಿಬ್ಬಂದಿ ವರ್ಗದವರು ಯಾವರೀತಿ ತರಬೇತಿ ಅರ್ಥವಾಗಿದೆ ಎನ್ನುವುದರ ಕುರಿತು ಲಘು ಪರೀಕ್ಷೆಯ ಮೂಲಕ ಈ ತರಬೇತಿಯನ್ನು ನೀಡಿದರು. ಈ ತರಬೇತಿಯನ್ನು ಸಾಕ್ಯ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಅತ್ತೆಲಿಯ, ಜಫಿ, ಖಾಜಾ ಹುಸೇನ್, ವ್ಯವಸ್ಥಾಪಕರೊಂದಿಗೆ 8 ಜನ ಸಿಬ್ಬಂದಿ ವರ್ಗದವರು ಈ ತರಬೇತಿಯ ಸದುಪಯೋಗವನ್ನು ಪಡೆದುಕೊಂಡರು.

## "ಸ್ವ-ಸಹಾಯ ಸಂಘದ ಮಹಿಳೆಯರಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮ"

11 ಸೆಪ್ಟೆಂಬರ್ 2025ರಂದು ಕಲಬುರ್ಗಿ ತಾಲೂಕಿನ ನಂದಿಕೂರು ಗ್ರಾಮದಲ್ಲಿ ಜೈ ಭವಾನಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಕಾರ್ಯರ್ಕರ್ತರು ಸೇವಾಸಂಗಮ ಸಂಸ್ಥೆಇವರು ಮಾತನಾಡಿ. 0ಯಿಂದ 6ವರ್ಷದ ಮಕ್ಕಳಲ್ಲಿ ಬೆಳವಣಿಗೆ ಹಂತಗಳು ಕುಂಠಿತವಾಗುತ್ತವೆ. ಪರಿಣಾಮ ಮಕ್ಕಳು ದೈಹಿಕ, ಬೌದ್ಧಿಕ, ಸಾಮಾಜಿಕ, ಕಲಿಕಾ ಹಾಗೂ ಭಾಷಾ ನ್ಯೂನತೆಗೆ ತುತ್ತಾಗುತ್ತಾರೆ ಎಂದು ಹೇಳಿದರು. ಶ್ರೀಮತಿ ಇಂದು ಮಹಿಳಾ ಸಬಲೀಕರಣ ಕಾರ್ಯಕ್ರದಕಾರ್ಯಕರ್ತೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 10 ಮಹಿಳೆಯರು ಭಾಗವಹಿಸಿದರು.





## "ಡೆಂಗ್ಯೂಜ್ವರ ಮತ್ತು ಚಿಕ್ಕನ್ಗುನ್ಯಾ ಕುರಿತು ಜನರಲ್ಲಿ ಜಾಗೃತಿ"

12 ಸೆಪ್ಟೆಂಬರ್ 2025ರಂದು ಕಲಬುರಗಿ ತಾಲೂಕಿನಲ್ಲಿ ಬರುವ ಫರತಬಾದ ಗ್ರಾಮದ ಶರಣ ನಗರದಲ್ಲಿ ಡೆಂಗ್ಯೂಜ್ವರ ಮತ್ತು ಚಿಕ್ಕನ್ಗುನ್ಯಾ ಕುರಿತು ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ಗಂಗೂಬಾಯಿ BHEO ಪ್ರಾಥಮಿಕ ಆರೋಗ್ಯ ಕೇಂದ್ರ, ಫರಹತಬಾದ ಇವರು ಮಾತನಾಡಿ ಈ ರೋಗಗಳು ಹರಡಲು ಕಾರಣ ಮತ್ತು ಅದರ ಗುಣಲಕ್ಷಣಗಳ ಕುರಿತು ಹಾಗೂ ತಾವು ವಾಸಿಸುವ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛತೆಮಾಡಿಕೊಳ್ಳಬೇಕು ತಾವು ಬಳಸುವ ನೀರು ಮುಚ್ಚಿಡಬೇಕು ಇಲ್ಲವಾದಲ್ಲಿ ಈ ರೋಗಕ್ಕೆ ತಾವು ತುತಾಗುತ್ತೀರಿ ಎಂದು ಮಾಹಿತಿಯನ್ನು ನೀಡಿದರು. ಈ ಸಂಧರ್ಭದಲ್ಲಿ 20 ಮನೆಗಳ ಭೇಟಿ ಮಾಡಿ ನೀರಿನ ಟ್ಯಾಂಕಾಗಳು ಇನ್ನಿತರ ಸಾಮಗ್ರಿಗಳನ್ನು ಪರಿಶೀಲಿಸುವ ಮೂಲಕ ಜನರಿಗೆ ಮಾಹಿತಿಯನ್ನು ನೀಡಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ್ ಕಾರ್ಯಕರ್ತರು ಸೇವಾಸಂಗಮ ಸಂಸ್ಥೆ, ಕಲಬುರಗಿ ಸರೋಜ ಸಿಸ್ಟರ್, ಆಶಾಕಾರ್ಯಕರ್ತೆ ಹಾಗೂಶ್ರೀಮತಿ ಸುನೀತಾ, ಶ್ರೀ ರಾಜಶೇಖರ್ ರೇಡ್ಡಿ ಹಾಗೂ ಶ್ರೀಮತಿ ರೇಣುಕಾಅವರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದರು. ಕಾರ್ಯಕ್ರಮದಲ್ಲಿ 18 ವಿದ್ಯಾರ್ಥಿನಿಯರು ಕಾಲೋನಿಯ ಯುವ ಮುಖಂಡರು ಮಹಿಳೆಯರು ಭಾಗವಹಿಸಿದರು.







## “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”


ದೀದರ • ಕಲಬುರಗಿ • ರಾಯಚೂರು • ಕೊಪ್ಪಳ • ಬಳ್ಳಾರಿ • ಬಾಗಲಕೋಟೆ • ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ   Postal Registration No. BDR/054/2024-2026 • EMAIL ID:mallammanudi@gmail.com

# ಮಲ್ಲಮ್ಮ ನುಡಿ

Mallammanudi Regional NewsPaper   ಸಂಪಾದಕರು: ರಮೇಶರೆಡ್ಡಿ   ಪ್ರಾದೇಶಿಕ ಕನ್ನಡ ದಿನಪತ್ರಿಕೆ   ಮೊ.9448604450

07 Sep 2025 - Page 7


### ಮದರ್ ತೆರೇಸಾ ಪುಣ್ಯಸ್ಮರಣೆ ಅಂಗವಾಗಿ ಫಲಾನುಭವಿಗಳಿಗೆ ಕುರಿ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಆರ್ಬಿಟ್ ಸಂಸ್ಥೆ ಆರೋಗ್ಯ ಸಂರಕ್ಷಣೆ, ಪರಿಸರ ಜಾಗೃತಿ, ಬಡ ಜನರ ಅಭಿವೃದ್ಧಿಗಾಗಿ ಹಲವಾರು ತರಬೇತಿಗಳು ನೀಡಿ ಬಡಬಗ್ಗುರು ಸ್ವಾವಲಂಬಿಗಳಾಗಿಬದುಕಲುಸಹಾಯ ಮಾಡುತ್ತಿದೆ ಎಂದು ಜಿಲ್ಲಾ ಕುಷ್ಠರೋಗ ಅಧಿಕಾರಿ ಡಾ. ಕಿರಣ ಪಾಟೀಲ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಮದರ್ ತೆರೇಸಾ ಪುಣ್ಯಸ್ಮರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಕುರಿ ವಿತರಿಸಿ ಮಾತನಾಡುತ್ತ ತಿಳಿಸಿದರು. ಈ ಸಂಸ್ಥೆಗೆ ಆರೋಗ್ಯ ಸಂರಕ್ಷಣೆ ಜಾಗೃತಿಗೆ ಇಲಾಖೆಯಿಂದ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು. ಕುಷ್ಠರೋಗ ಪ್ರಾಥಮಿಕ ಹಂತದಲ್ಲಿಯೇ ಗುರುತಿಸಿ ಚಿಕಿತ್ಸೆ ಪಡೆದುಕೊಳ್ಳಲು ಕರೆ ನೀಡಿದರು. ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿ, ಮದರ್ ತೆರೇಸಾ ಅವರು ಕುಷ್ಠರೋಗಿಗಳಿಗೆ ಅಮೋಘವಾದ ಸೇವೆ ಮಾಡಿದ್ದಾರೆ. ಮದರ್ ತೆರೇಸಾ ರವರ ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಂಡು ಸಮಾಜ ಸೇವೆಗೆ ತೊಡಗಿಸಿಕೊಳ್ಳಲು ಸಲಹೆ ನೀಡಿದರು. ಮದರ್ ತೆರೇಸಾ ಪುಣ್ಯಸ್ಮರಣೆ ಅಂಗವಾಗಿ ಕುರಿ ವಿತರಣೆ ಮಾಡಲಾಗಿದೆ ಎಂದರು. ಅಜೀಂ ಪ್ರೇಮಜಿ ಫೌಂಡೇಶನ್ ಆಶ್ರಯದಲ್ಲಿ ಕಾರ್ಯಕ್ರಮ ಜರುಗಿತ್ತು, ಅರುಣ ಕೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಅಜೀಂ ಪ್ರೇಮಜಿ ಫೌಂಡೇಶನ್ ಜಿಲ್ಲಾ ಸಂಯೋಜಕ ಶಿವಕುಮಾರ್, ಅಭಿಷೇಕ್, ನವಜೀವನ ಸಂಯೋಜಕ ಪ್ರವೀಣಕುಮಾರ್, ಕಂಟಿ, ಅರುಣ, ಹಣಮಂತ, ಡೇವಿಡ್, ಪೂಜಾ, ಮಹಾದೇವಿ, ಪ್ರೀತಿ ಸೇರಿದಂತೆ ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

### ಆರ್ಬಿಟ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ



ಹುಮನಾಬಾದ: ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ ಬುಧವಾರ ಆರ್ಬಿಟ್ ಸಂಸ್ಥೆ ಹಾಗೂ ಐಸಿಐವೈಎಂ ಗುಲ್ಬರ್ಗ ಧರ್ಮಕ್ಷೇತ್ರದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ನಡೆಯಿತು.

ಫಾದರ ಸಂತೋಷ್ ಬಾಪು ಮಾತನಾಡಿ, ರಕ್ತದಾನ ಮಾಡುವುದು ಮಾನವ ಜೀವನದಲ್ಲಿ ಸಿಗುವ ಶ್ರೇಷ್ಠ ಅವಕಾಶ. ಪ್ರತಿಯೊಬ್ಬರೂ ಮತ್ತೊಬ್ಬರ ಜೀವ ಉಳಿಸಲು ರಕ್ತದಾನಕ್ಕೆ ಮುಂದೆ ಬರಬೇಕು ಎಂದು ತಿಳಿಸಿದರು.

ತಾಲೂಕ ವೈದ್ಯಾಧಿಕಾರಿ ಡಾ.ಶಿವಕುಮಾರ ಸಿದ್ದೇಶ್ವರ ಮಾತನಾಡಿ,ಆರ್ಬಿಟ್ ಸಂಸ್ಥೆ ಹಲವು ವರ್ಷಗಳಿಂದ ಸಮಾಜ ಸೇವೆ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಜನಜಾಗೃತಿ ಹಾಗೂ ಸೇವಾ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಬಣ್ಣಿಸಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ ವಾಸ ಮಾತನಾಡಿ, ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ರಕ್ತದಾನ. ತುರ್ತು ಪರಿಸ್ಥಿತಿಯಲ್ಲಿ ಅನೇಕರ ಜೀವ ಉಳಿಸಲು ಬಹಳ ಉಪಯುಕ್ತ, ರಕ್ತದಾನ ಮಾಡುವ ಮೂಲಕ ಇತರರ ಜೀವ ಉಳಿಸುವುದರ ಜೊತೆಗೆ ದಾನಿಗಳಿಗೆ ಆರೋಗ್ಯಕರ ಪ್ರಯೋಜನವೂ ಲಭಿಸುತ್ತದೆ.ಸುಮಾರು ೭೫ ಮಂದಿ ರಕ್ತದಾನ ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ರಿಮ್ಸ್ ಆಸ್ಪತ್ರೆಯ ರಕ್ತನಿಧಿ ಘಟಕದ ಡಾ.ಮಲ್ಲಣ್ಣ ಗೌಡ ಪಾಟೀಲ್,ಫಾದರ ಸ್ಟಾನಿ ಲೋಬೊ,ಫಾದರ ಆಲ್ಬರ್ಟ,ಎಎಸ್ಐ ಅಶೋಕ, ಐಸಿಐವೈಎಂ ನಿರ್ದೇಶಕ ಫಾದರ ಸಚಿನ್, ಉಪನ್ಯಾಸಕಿ ಸಂತೋಷಿ ಹಾಗೂ ವಿದ್ಯಾರ್ಥಿ ವೃಂದ, ಸಿಸ್ಟರ್ ಲೀರಾ,ಫಾದರ ಜಾರ್ಜ, ಫಾದರ ರಾಬರ್ಟ, ಫಾದರ ವಿನಯ,ಫಾದರ ಆರೋನ್,ಫಾದರ ಕ್ಲ್ಯಾರಿ,ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ ಆರ್ಬಿಟ್ ಸಿಬ್ಬಂದಿ ವರ್ಗ ಹಾಜರಿದ್ದರು.

### ರಕ್ತದಾನದಿಂದ ಉತ್ತಮ ಆರೋಗ್ಯ: ಟಿಎಚ್ಒ

ಪ್ರಜಾವಾಣಿ ವಾರ್ತೆ

ಹುಮನಾಬಾದ್: 'ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುವುದರ ಜತೆ ದೇಹವು ಸದೃಢವಾಗಿ ಇರುತ್ತದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಶಿವಕುಮಾರ ಸಿದ್ದೇಶ್ವರ ತಿಳಿಸಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ತೆರೇಸಾ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

3 ತಿಂಗಳಿಗೆ ಒಮ್ಮೆ ರಕ್ತದಾನ ಮಾಡಬಹುದು. ರಕ್ತದಾನದಿಂದ ಕೊಬ್ಬಿನ ಅಂಶ ಕಮ್ಮಿಯಾಗುತ್ತದೆ. ಹೃದಯಾಘಾತದ ಸಾಧ್ಯತೆ ಕಮ್ಮಿಯಾಗುತ್ತದೆ ಎಂದು ಹೇಳಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿ, 'ಒಟ್ಟು 75 ಜನರಿಂದ ರಕ್ತದಾನ ಮಾಡಿಸಲಾಗುತ್ತಿದೆ' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂತೋಷ, ಡಾ.ಮಲ್ಲಣ್ಣಗೌಡ ಪಾಟೀಲ, ಸ್ಟಾನಿ ಲೋಬೊ, ಆಲ್ಬರ್ಟ್, ಎಎಸ್ಐ ಅಶೋಕ, ಸಚಿನ್, ಸಂತೋಷಿ, ಲೀರಾ, ಜಾರ್ಜ್, ರಾಬರ್ಟ್, ವಿನಯ, ಆರೋನ್, ಕ್ಲ್ಯಾರಿ, ಪ್ರೀತಿ, ಶೀಲಾ ಸೇರಿದಂತೆ ಇತರರು ಇದ್ದರು.



ಹುಮನಾಬಾದ್ ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಶಿವಕುಮಾರ ಸಿದ್ದೇಶ್ವರ ಮಾತನಾಡಿದರು

### ಆರ್ಬಿಟ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ




• ದಿ ಡೈಲಿ ನ್ಯೂಸ್ ಹುಮನಾಬಾದ

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ ಬುಧವಾರ ಆರ್ಬಿಟ್ ಸಂಸ್ಥೆ ಹಾಗೂ ಐಸಿಐವೈಎಂ ಗುಲ್ಬರ್ಗ ಧರ್ಮಕ್ಷೇತ್ರದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ನಡೆಯಿತು.

ಫಾದರ ಸಂತೋಷ್ ಬಾಪು ಮಾತನಾಡಿ, ರಕ್ತದಾನ ಮಾಡುವುದು ಮಾನವ ಜೀವನದಲ್ಲಿ ಸಿಗುವ ಶ್ರೇಷ್ಠ ಅವಕಾಶ. ಪ್ರತಿಯೊಬ್ಬರೂ ಮತ್ತೊಬ್ಬರ ಜೀವ ಉಳಿಸಲು ರಕ್ತದಾನಕ್ಕೆ ಮುಂದೆ ಬರಬೇಕು ಎಂದು ತಿಳಿಸಿದರು. ತಾಲೂಕ ವೈದ್ಯಾಧಿಕಾರಿ ಡಾ.ಶಿವಕುಮಾರ ಸಿದ್ದೇಶ್ವರ ಮಾತನಾಡಿ,ಆರ್ಬಿಟ್ ಸಂಸ್ಥೆ ಹಲವು ವರ್ಷಗಳಿಂದ ಸಮಾಜ ಸೇವೆ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಜನಜಾಗೃತಿ ಹಾಗೂ ಸೇವಾ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಬಣ್ಣಿಸಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ ವಾಸ ಮಾತನಾಡಿ,ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ರಕ್ತದಾನ.ತುರ್ತು ಪರಿಸ್ಥಿತಿಯಲ್ಲಿ ಅನೇಕರ ಜೀವ ಉಳಿಸಲು ಬಹಳ ಉಪಯುಕ್ತ.ರಕ್ತದಾನ ಮಾಡುವ ಮೂಲಕ ಇತರರ ಜೀವ ಉಳಿಸುವುದರ ಜೊತೆಗೆ ದಾನಿಗಳಿಗೆ ಆರೋಗ್ಯಕರ ಪ್ರಯೋಜನವೂ ಲಭಿಸುತ್ತದೆ.ಸುಮಾರು 75 ಮಂದಿ ರಕ್ತದಾನ ಮಾಡಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ರಿಮ್ಸ್ ಆಸ್ಪತ್ರೆಯ ರಕ್ತನಿಧಿ ಘಟಕದ ಡಾ.ಮಲ್ಲಣ್ಣ ಗೌಡ ಪಾಟೀಲ್,ಫಾದರ ಸ್ಟಾನಿ ಲೋಬೊ,ಫಾದರ ಆಲ್ಬರ್ಟ್,ಎಎಸ್ಐ ಅಶೋಕ, ಐಸಿಐವೈಎಂ ನಿರ್ದೇಶಕ ಫಾದರ ಸಚಿನ್,ಉಪನ್ಯಾಸಕಿ ಸಂತೋಷಿ ಹಾಗೂ ವಿದ್ಯಾರ್ಥಿ ವೃಂದ, ಸಿಸ್ಟರ್ ಲೀರಾ,ಫಾದರ ಜಾರ್ಜ್,ಫಾದರ ರಾಬರ್ಟ್,ಫಾದರ ವಿನಯ,ಫಾದರ ಆರೋನ್,ಫಾದರ ಕ್ಲ್ಯಾರಿ,ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ ಆರ್ಬಿಟ್ ಸಿಬ್ಬಂದಿ ವರ್ಗ ಹಾಜರಿದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.




**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in